Swabhimani Sahakari
Pages - 24, ₹12
Volume -13
Issue - 06
June - 2016

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ
ಮೀಸಲಾಗಿರುವ ಏಕೈಕ ಮಾಸಪತ್ರಿಕೆ












ಜೂನ್ ೫ ವಿಶ್ವ ಪರಿಸರ ದಿನಾಚರಣೆ

## ಪರಿಸರ ಸಂರಕ್ಷಣೆ ಇಂದಿನ ತುರ್ತು ಅಗತ್ಯ

▸▸ ಸೌಹಾರ್ದ ಸಹಕಾರಿಗಳ ಸಂಖ್ಯೆ : 3620 ▸▸ 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 929



# ಯುವಕರು ಸಹಕಾರ ಕ್ಷೇತ್ರದಲ್ಲಿ ಸಕ್ರಿಯವಾಗಿ ಭಾಗವಹಿಸಲು ಪ್ರೇರೇಪಣೆ ಕಾರ್ಯ ಅವಶ್ಯಕ

ಈ ದೇಶದ ಸಹಕಾರ ಕ್ಷೇತ್ರ ಚಳುವಳಿಗೆ 112 ವರ್ಷಗಳ ಇತಿಹಾಸವಿದೆ. ನಮ್ಮ ದೇಶದ ಸಹಕಾರ ಚಳುವಳಿ ಇಡೀ ವಿಶ್ವದಲ್ಲಿಯೇ ಬೃಹತ್ ಗಾತ್ರದ್ದಾಗಿದೆ ಮತ್ತು ಉತ್ತಮ ಗುಣಮಟ್ಟದ್ದಾಗಿದೆ. 6 ಲಕ್ಷಕ್ಕೂ ಹೆಚ್ಚು ಸಹಕಾರ ಸಂಸ್ಥೆಗಳು, 30 ಕೋಟಿ ಸದಸ್ಯ ಬಳಗವನ್ನು ಹೊಂದಿದೆ. ಸರಕಾರಗಳ ಅನೇಕ ಯೋಜನೆಗಳ ಜಾರಿಗೆ ಸಾಧನವಾಗಿದೆ. ಈ ದೇಶದ ಜನರ ಜೀವನ ಪದ್ಧತಿಯಾಗಿರುವ ಸಹಕಾರ ಸಂಸ್ಥೆಗಳು ಉತ್ತಮ ಆರ್ಥಿಕ ಸಂಘಟನೆಗಳಾಗಿ ಕಾರ್ಯನಿರ್ವಹಿಸುತ್ತಿವೆ.

ವಿಶ್ವದಲ್ಲಿ ಅತೀ ಹೆಚ್ಚು ಯುವಕರನ್ನು ಹೊಂದಿರುವ ರಾಷ್ಟ್ರ ಭಾರತ. ದೇಶದ ಜನಸಂಖ್ಯೆಯ ಶೇಕಡಾ 65 ಜನರು 35 ವರ್ಷದ ಒಳಗಿನವರಿದ್ದಾರೆ. ಜನಸಂಖ್ಯೆಯ ಅರ್ಧದಷ್ಟು ಜನ 25 ವರ್ಷದ ಒಳಗಿನವರಿದ್ದಾರೆ. ಈ ಜನರ ಭವಿಷ್ಯದ ಬಗ್ಗೆ, ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯ ಬಗ್ಗೆ ಸರಕಾರ, ಸಮಾಜವು ಚಿಂತಿಸುವುದರ ಜೊತೆಗೆ ಸಾಮಾಜಿಕ ಕಳಕಳಿ ತತ್ವದ ಹಿನ್ನೆಲೆಯಲ್ಲಿ ಸಹಕಾರ ಚಳುವಳಿಯನ್ನು ನಡೆಸುವಂತೆ ಪ್ರೇರೇಪಿಸಲು ಚಿಂತಿಸಬೇಕಿದೆ.

ದೇಶದ ಜನಸಂಖ್ಯೆಯಲ್ಲಿ ಸಹಕಾರ ಕ್ಷೇತ್ರದ ಪ್ರಸ್ತುತ 30 ಕೋಟಿ ಸದಸ್ಯರನ್ನು ಮಾತ್ರ ಬಳಸಿದೆ. ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಜನರು ಸಹಕಾರ ಕ್ಷೇತ್ರದತ್ತ ಬರಬೇಕಿದೆ. ಸಹಕಾರ ಕ್ಷೇತ್ರದ ಬಗ್ಗೆ ಯುವ ಜನರ ಅಭಿಪ್ರಾಯವೇನು? ಅವರು ಸಹಕಾರ ಕ್ಷೇತ್ರಕ್ಕೆ ಬರದಿರಲು ಕಾರಣಗಳೇನು? ಅವರು ಈ ಕ್ಷೇತ್ರದ ಕಡೆಗೆ ವಾಲುವಂತೆ ಮಾಡಬೇಕಿರುವ ಉಪಾಯಗಳ ಬಗ್ಗೆ ಸಹಕಾರಿಗಳು ವಿಮರ್ಶೆ ಮಾಡಬೇಕಿರುವ ಸಮಯ ಇದಾಗಿದೆ.

ಹೆಚ್ಚಿನ ಯುವಕರಿಗೆ ಸಹಕಾರ ತತ್ವಗಳ, ಸಹಕಾರ ಕ್ಷೇತ್ರದ ಕಾರ್ಯವೈಖರಿ ಬಗ್ಗೆ ಅರಿವಿಲ್ಲದಿರುವುದು ಪ್ರಮುಖ ಕಾರಣ. ಕೆಲವರು ಸಹಕಾರಿ ಕ್ಷೇತ್ರದಲ್ಲಿ ನಿಷ್ಠೆ ಹಾಗೂ ದಕ್ಷತೆ ಇಲ್ಲದಿರುವುದು, ಪಾರದರ್ಶಕತೆಯ ಮತ್ತು ವೃತ್ತಿಪರತೆಯ ಕೊರತೆ, ಕ್ಷೇತ್ರದಲ್ಲಿ ನಡೆಯುತ್ತಿರುವ ಅಪ್ರಾಮಾಣಿಕ ವ್ಯವಹಾರಗಳು, ಸರಕಾರದ ಹಿಡಿತ, ರಾಜಕೀಯ ಬೆರೆಸುವಿಕೆ, ಸ್ವಜನಪಕ್ಷಪಾತ ಇತ್ಯಾದಿ ವಿಷಯಗಳಿಂದಾಗಿ ಬೇಸತ್ತು ಈ ಕ್ಷೇತ್ರದಿಂದ ದೂರವಿರುವುದು ಒಂದು ಬಲವಾದ ಕಾರಣ.

ಈ ಎರಡು ವಿಷಯಗಳಿಂದ ಯುವ ಸಮೂಹವನ್ನು ಹೊರತರಬೇಕಿದೆ. ಯುವಕರಿಗೆ ಸಹಕಾರ ಕ್ಷೇತ್ರದ ಬಗ್ಗೆ ಅರಿವು ಮೂಡಿಸುವ, ಆಸಕ್ತಿ ಹೆಚ್ಚಿಸುವ, ಈ ಕ್ಷೇತ್ರದ ಸಾಧನೆಗಳನ್ನು ಈ ಕ್ಷೇತ್ರದ ಪ್ರಯೋಜನಗಳನ್ನು ತಿಳಿಯಪಡಿಸಿ ಅವರನ್ನು ಪ್ರೇರೇಪಿಸುವ, ಸಹಕಾರ ಕ್ಷೇತ್ರದ ಪಾರದರ್ಶಕ ಆಡಳಿತವನ್ನು ಹಾಗೂ ವೃತ್ತಿಪರತೆಯನ್ನು ರೂಢಿಸಿಕೊಳ್ಳುವ ಮೂಲಕ ಮತ್ತು ಆಧುನಿಕ ತಾಂತ್ರಿಕತೆಯನ್ನು ಅಳವಡಿಸುವುದರ ಮೂಲಕ ಮತ್ತು ಸಹಕಾರ ಕ್ಷೇತ್ರದಲ್ಲಿ ರಾಜಕೀಯವನ್ನು ಬೆರೆಸದೆ ಜಾತೀಯತೆಯಿಂದ ದೂರವಿಟ್ಟು ಪ್ರಾಮಾಣಿಕ ಹಾಗೂ ದಕ್ಷತೆಯಿಂದ ಕಾರ್ಯನಿರ್ವಹಿಸುವ ಪ್ರವೃತ್ತಿಯನ್ನು ಬೆಳೆಸಿದಾಗ ಯುವಕರು ಈ ಕ್ಷೇತ್ರದ ಬಗ್ಗೆ ಆಕರ್ಷಿತರಾಗುತ್ತಾರೆ. ಸರಕಾರಗಳು ಸಹಕಾರ ಕ್ಷೇತ್ರವನ್ನು ಒಂದು ಆರ್ಥಿಕ ವ್ಯವಸ್ಥೆಯನ್ನಾಗಿ ಕಾಣಬೇಕು. ಇದಕ್ಕೆ ಅಗತ್ಯ ಸ್ವಾಯತ್ತತೆ ಹಾಗೂ ಪ್ರೋತ್ಸಾಹಗಳನ್ನು ನೀಡಬೇಕು. ಕನಿಷ್ಠ ನಿಯಂತ್ರಣವನ್ನು ಹೊಂದಿರಬೇಕು. ಹೀಗಾದಾಗ ಮಾತ್ರ ಯುವಕರು ಸಹಕಾರ ಕ್ಷೇತ್ರದಲ್ಲಿ ಆಸಕ್ತಿ ವಹಿಸಿ, ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ. ಇದರಿಂದ ಸಹಕಾರ ಕ್ಷೇತ್ರದ ಬೆಳವಣಿಗೆ ಮತ್ತು ಯುವಕರ ಆರ್ಥಿಕ ಅಭಿವೃದ್ಧಿಯೂ ಆಗುತ್ತದೆ.

> ಹೆಚ್ಚಿನ ಯುವಕರಿಗೆ ಸಹಕಾರ ತತ್ವಗಳ, ಸಹಕಾರ ಕ್ಷೇತ್ರದ ಕಾರ್ಯವೈಖರಿ ಬಗ್ಗೆ ಅರಿವಿಲ್ಲದಿರುವುದು ಪ್ರಮುಖ ಕಾರಣ. ಕೆಲವರು ಸಹಕಾರಿ ಕ್ಷೇತ್ರದಲ್ಲಿ ನಿಷ್ಠೆ ಹಾಗೂ ದಕ್ಷತೆ ಇಲ್ಲದಿರುವುದು, ಪಾರದರ್ಶಕತೆಯ ಮತ್ತು ವೃತ್ತಿಪರತೆಯ ಕೊರತೆ, ಕ್ಷೇತ್ರದಲ್ಲಿ ನಡೆಯುತ್ತಿರುವ ಅಪ್ರಾಮಾಣಿಕ ವ್ಯವಹಾರಗಳು, ಸರಕಾರದ ಹಿಡಿತ, ರಾಜಕೀಯ ಬೆರೆಸುವಿಕೆ, ಸ್ವಜನಪಕ್ಷಪಾತ ಇತ್ಯಾದಿ ವಿಷಯಗಳಿಂದಾಗಿ ಬೇಸತ್ತು ಈ ಕ್ಷೇತ್ರದಿಂದ ದೂರವಿರುವುದು ಒಂದು ಬಲವಾದ ಕಾರಣ.

▶▶ **ಗುರುನಾಥ ಜಾಂತಿಕರ,** ಅಧ್ಯಕ್ಷರು

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಗುರುನಾಥ ಜಾಂತಿಕರ
ಗೌರವ ಅಧ್ಯಕ್ಷರು

ಶ್ರೀ ಹೆಚ್.ವಿ.ರಾಜೀವ
ಗೌರವ ಉಪಾಧ್ಯಕ್ಷರು

ಶ್ರೀ ಎಸ್.ಆರ್.ಸತೀಶಚಂದ್ರ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ್
ಸಂಪಾದಕರು

ಶ್ರೀ ವಿ.ಜಿ.ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

## ಒಳ ಪುಟಗಳಲ್ಲಿ . . .

ರಾಷ್ಟ್ರೀಯ ಸಹಕಾರ ಯೂನಿಯನ್‌ನ ಮುಖ್ಯಕಾರ್ಯ ನಿರ್ವಾಹಕರಾಗಿ ಶ್ರೀ ಸತ್ಯನಾರಾಯಣ; ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರವರಿಂದ ಅಭಿನಂದನೆ ........ 5

ವಿಷಯ ತಜ್ಞರ ಸಭೆ ........ 7

“ಶಾಖೆಗಳ ನಿರ್ವಹಣೆ ಹಾಗೂ ಗ್ರಾಹಕರ ಸೇವೆಗಳ ವಿಷಯಗಳು” ಬಗ್ಗೆ ತರಬೇತಿ ಕಾರ್ಯಕ್ರಮ ........ 8

ಸಹಕಾರಿಯ ಉದ್ಘಾಟನೆ ........ 9

ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್‌ನ ವರ್ಷಾಚರಣೆ ಕಾರ್ಯಕ್ರಮ ........ 11

ಸಿದ್ಧಸಿರಿ ಪತ್ತಿನ ಸೌಹಾರ್ದ ಸಹಕಾರಿಯ ದಶಮಾನೋತ್ಸವ ........ 13

ನಿಮ್ಮ ಪ್ರಶ್ನೆ – ನಮ್ಮ ಉತ್ತರ ........ 15

ವಿಶ್ವ ಪರಿಸರ ದಿನ ವಿಶೇಷ ಲೇಖನ ........ 16

ಜಲ ಸಂರಕ್ಷಣೆ – ಸೌಹಾರ್ದ ಅಭಿವೃದ್ಧಿಯ ಹೊಸ ಪರಿಕಲ್ಪನೆ ........ 19

ಸಾಲ ಗುಣಾತ್ಮಕವಾಗುವುದು ಹೇಗೆ? ........ 21

# ಸಂಪಾದಕೀಯ

## ವಿಶ್ವವಿದ್ಯಾನಿಲಯಗಳಲ್ಲಿ “ಸಮುದಾಯ ಹಾಗೂ ಸಹಕಾರ ಅಭಿವೃದ್ಧಿಯ” ಕಾರ್ಯಕ್ರಮಗಳು

ದಿನಾಂಕ 12 ಮೇ 2016ರಂದು ಮೈಸೂರು ವಿಶ್ವವಿದ್ಯಾನಿಲಯದಲ್ಲಿ “ಸಮುದಾಯ ಹಾಗೂ ಸಹಕಾರ ಅಭಿವೃದ್ಧಿ”ಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪಾತ್ರ ಎಂಬ ವಿಷಯದ ಬಗ್ಗೆ ಬಹಳ ಅರ್ಥಪೂರ್ಣ ವಿಚಾರ ವಿನಿಮಯಗಳು ನಡೆದಿದ್ದು, ಅದರಲ್ಲಿ ಪ್ರಮುಖವಾಗಿ ಸರಕಾರದ ಧ್ಯೇಯ – ಧೋರಣೆಗಳು, ಕಾರ್ಯಕ್ರಮಗಳು, ಬಡತನ ನಿವಾರಣೆ, ನಿರುದ್ಯೋಗ ನಿವಾರಣೆ, ಸಮಾಜದ ಆರೋಗ್ಯ ನಿರ್ವಹಣೆ, ಪರಿಣಾಮಕಾರಿ ಶಿಕ್ಷಣ ಇತ್ಯಾದಿ ವಿಷಯಗಳ ಜೊತೆಗೆ ಸಹಕಾರ ಕ್ಷೇತ್ರ ಪರಿಣಾಮಕಾರಿ ಕಾರ್ಯನಿರ್ವಹಣೆಯಲ್ಲಿ ವಿಶ್ವವಿದ್ಯಾನಿಲಯಗಳ ಪಾತ್ರ ಎಂಬುದರ ಬಗ್ಗೆಯೂ ಚರ್ಚೆ ನಡೆದಿರುವುದು ಒಂದು ಉತ್ತಮವಾದ ಬೆಳವಣಿಗೆ.

ಯುವಕರು ಸಹಕಾರ ಕ್ಷೇತ್ರವನ್ನು ಬಳಸಿಕೊಂಡು ನಾಯಕತ್ವ ಅಭಿವೃದ್ಧಿಯನ್ನು ಮಾಡಿಕೊಳ್ಳಬಹುದು, ಯುವಕರು ಸಹಕಾರ ಸಂಸ್ಥೆಗಳನ್ನು ಪ್ರಾರಂಭಿಸಿ, ದೇಶದ ಬಡತನ ಹಾಗೂ ನಿರುದ್ಯೋಗ ನಿವಾರಣೆ ಕಾರ್ಯಗಳಲ್ಲಿ ಭಾಗವಹಿಸಬಹುದು, ಸಹಕಾರ ಕ್ಷೇತ್ರದ ಮೂಲಕವೇ ವ್ಯವಸಾಯ ಅಭಿವೃದ್ಧಿಯ ಜೊತೆಗೆ ಔದ್ಯೋಗಿಕ ಘಟಕಗಳನ್ನು, ಶೈಕ್ಷಣಿಕ ಸಂಸ್ಥೆಗಳನ್ನು, ಆರೋಗ್ಯ ಘಟಕಗಳನ್ನು ಪ್ರಾರಂಭಿಸಿ, ತಾವು ಬೆಳೆಯಬಹುದು, ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯನ್ನು ಸಾಧಿಸಬಹುದು, ಈ ಮೂಲಕ ಸಮಾಜದಲ್ಲಿ ಶೋಷಣೆಯನ್ನು ನಿವಾರಿಸುವಲ್ಲಿ ಸರ್ವರಿಗೂ ಸಮಾನತ್ವವನ್ನು ಸಾಧಿಸಲು ಸಾಧ್ಯ ಎಂಬ ಸಂದೇಶವನ್ನು ವಿಶ್ವವಿದ್ಯಾನಿಲಯಗಳು ಯುವಕರಿಗೆ ತಲುಪಿಸುವ ಕಾರ್ಯ ನಡೆಯಬೇಕಿದೆ.

ಪ್ರಪ್ರಥಮಬಾರಿಗೆ ಮೈಸೂರು ವಿಶ್ವವಿದ್ಯಾನಿಲಯದವರು ಈ ಕಾರ್ಯವನ್ನು ಪ್ರಾರಂಭಿಸಿರುವುದು ಬೇರೆ ವಿಶ್ವವಿದ್ಯಾನಿಲಯದವರಿಗೆ ಮಾದರಿ. ಅವರು ಅಭಿನಂದನಾರ್ಹರು. ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯದವರುಗಳು ಸಮುದಾಯ ಕೇವಲ ಡಿಗ್ರಿಗಳು ಅಲ್ಲ. ಸಮುದಾಯದ ಅಭಿವೃದ್ಧಿಯ ಬಗ್ಗೆಯೂ ಚಿಂತನೆ ನಡೆಸಿ, ಸಮಾಜದ ಎಲ್ಲಾ ವರ್ಗದ ಜನರ ಸಂಘ ಸಂಸ್ಥೆಗಳ ಅಭಿಪ್ರಾಯಗಳನ್ನು ಸಂಗ್ರಹಿಸಿ, ಸಮಾಜ ಅಭಿವೃದ್ಧಿಯ ಕಾರ್ಯಗಳನ್ನು ಜಾರಿ ಮಾಡಲು ಮುಂದಾದಲ್ಲಿ ಈ ದೇಶ ವಿಶ್ವದ ಪ್ರಮುಖ ರಾಷ್ಟ್ರಗಳ ಸಾಲಿನಲ್ಲಿ ಅಗ್ರಸ್ಥಾನಕ್ಕೇರುವುದು ನಿರ್ವಿವಾದ. ಈ ದಿಶೆಯಲ್ಲಿ ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳು ಕಾರ್ಯೋನ್ಮುಖರಾಗಲಿ ಎಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ. ■



## ಜ್ಞಾನ ಜ್ಯೋತಿ

ಶ್ರೀ ಬಸವೇಶ್ವರ ಸ್ವಾಮೀಜಿಯವರ
ಉಪನ್ಯಾಸ ಸಂಗ್ರಹಗಳ ಆಯ್ದ ಭಾಗ

### ದ್ವೇಷ ಮನಸ್ಸಿನ ವಿಕಾರ – ಸದ್ಭಾವನೆ ಶಾಂತಿಯ ಮೂಲ

ಜಗತ್ತಿನಲ್ಲಿ ಏನೇನು ಕಾಣುತ್ತದೆ? ಅದು ಒಮ್ಮೆ ಶಾಂತವಾಗುತ್ತದೆ, ದೀಪ ಹೊತ್ತಿಕೊಳ್ಳುತ್ತದೆ, ಒಂದಿಷ್ಟು ಕಾಲ ಉರಿಯುತ್ತದೆ, ನಂತರ ಶಾಂತವಾಗುತ್ತದೆ. ಇಡೀ ಜೀವ ಜಗತ್ತಿನಲ್ಲಿ ಇರುವುದೆಲ್ಲಾ ದೀಪಗಳೇ, ಕಾಲದ ಖಂಡದಲ್ಲಿ ವರ್ಷ ವರ್ಷಗಳ ಕಾಲ ಉರಿಯುತ್ತವೆ, ಕೊನೆಗೆ ಒಂದು ದಿನ ಶಾಂತವಾಗುತ್ತದೆ. ಕೇವಲ ಜೀವಂತ ವಸ್ತುಗಳಷ್ಟೇ ಅಲ್ಲ. ಜಡ ಪದಾರ್ಥಗಳೂ ಕೊನೆಗೆ ಒಂದು ದಿನ ನಾಶವಾಗುತ್ತವೆ.

ಸೂರ್ಯನೂ ಕೂಡ ಸಾವಿರ ಸಾವಿರ ಕೋಟಿ ವರ್ಷಗಳ ಕಾಲ ಉರಿಯುತ್ತಾನೆ. ವಿಜ್ಞಾನಿ ಸ್ಟೇಫನ್ ಹ್ಯಾಕರಿನ್ ಹೇಳುತ್ತಾನೆ; ಸೂರ್ಯನೂ ಮರೆಯಾಗುತ್ತಾನೆ. ಅದೆಷ್ಟು ಮರೆಯಾಗುತ್ತಾನೆ ಅಂದರೆ ತಾನು ಇದ್ದನೋ ಇಲ್ಲವೋ ಅನ್ನುವ ಹಾಗೆ ಮರೆಯಾಗುತ್ತಾನೆ. ಹೀಗೆ ಜಗತ್ತಿನ ಸಮಸ್ತ ವಸ್ತುಗಳೂ ಮರೆಯಾಗುತ್ತವೆ. ಜಗತ್ತಿನ ದೀಪವೇ ಆರಿ ಹೋಗುವಾಗ ನಮ್ಮದೇನು? ನಮ್ಮ ಸಣ್ಣದೀಪ ಎಷ್ಟು ಹೊತ್ತು ಉರಿಯುತ್ತದೆ? ಯಾವುದು ಉರಿಯುತ್ತದೆ ಅದು ಆರುತ್ತದೆ. ಎಷ್ಟೇ ದೊಡ್ಡದಿರಬಹುದು, ಎಷ್ಟೇ ಸಣ್ಣದಿರಬಹುದು, ಎಲ್ಲವೂ ಕೊನೆಗೊಮ್ಮೆ ಮರೆಯಾಗುತ್ತವೆ. ಯಾವುದು ಕಾಣಿಸಿಕೊಳ್ಳುತ್ತದೆ, ಅದು ಮುಂದೊಂದು ದಿನ ಕಾಣಿಸಿಕೊಳ್ಳದೆ ಹೋಗುತ್ತದೆ. ಇದು ಸಿದ್ಧಾಂತ. ಎಲ್ಲ ಉರಿದಾಗ ಉಳಿವ ಶಾಂತಿಯೇ 'ದೇವರು'. ಅದು ಶಾಶ್ವತ ಸತ್ಯ. ಎಲ್ಲವೂ ಶಾಂತವಾದ ಬಳಿಕ ಒಂದು ಉಳಿಯುತ್ತದೆ ಅದು 'ಪರಮಾತ್ಮ' ಅದೇ ಸತ್ಯಂ, ಶಿವಂ, ಸುಂದರಂ.

ಜಗತ್ತಿನಲ್ಲಿ ವೈವಿಧ್ಯತೆ ಇರುವುದರಿಂದ "ಸುಂದರ". ಇದನ್ನು ಒಪ್ಪಿಕೊಳ್ಳದಿದ್ದರೆ ದ್ವೇಷ ಶುರುವಾಗುತ್ತದೆ. ಏಕೆಂದರೆ, ಮನಸ್ಸಿಗೆ ಹಿಡಿಸೋಲ್ಲ. ನನಗೆ ಯಾವುದು ಹಿಡಿಸಲ್ಲ ಅದು ಈ ಜಗತ್ತಿನೊಳಗೆ ಇರಬಾರದು ಎಂದರೆ ಹೇಗೆ ಸಾಧ್ಯ? ಸುಂದರ ಅವರವರ ದೃಷ್ಟಿಯಲ್ಲಿರುತ್ತದೆ. ಜಗತ್ತಿನಲ್ಲಿ ಯಾವುದೂ ಸುಂದರವಲ್ಲ. ಅದು ನಮ್ಮ ದೃಷ್ಟಿಕೋನ. ನಮಗೆ ಏನು ಹಿಡಿಸುತ್ತದೆ ಅದು ಸುಂದರವಾಗಿರುತ್ತದೆ. ನಿಮ್ಮನ್ನು ನೀವು ತಿಳಿದರೆ ಜಗಳ ಆಗುವುದಿಲ್ಲ.

ದ್ವೇಷ ಬಹು ಕೆಟ್ಟದ್ದು. ಅವರು ಅವರಂತೆ ಬದುಕುತ್ತಾರೆ, ನನಗೆ ಹಿಡಿಸದಿದ್ದರೇನಂತೆ? ನಾನೂ ಇರಬೇಕು. ಅವರೂ ಇರಬೇಕು. ಕತ್ತಲು– ಬೆಳಕು, ವಸಂತ– ಹೇಮಂತ ಎರಡೂ ಇರಬೇಕು. ಅದು ಜಗತ್ತಿನ ರಚನೆಯ ನೀತಿ, ನಿಸರ್ಗದ ವೈಶಿಷ್ಟ್ಯ. ಭಗವಂತ ಯಾರನ್ನೂ ದ್ವೇಷಿಸುವುದಿಲ್ಲ. ನಿಸರ್ಗ ಯಾರನ್ನೂ ದ್ವೇಷಿಸುವುದಿಲ್ಲ. Nature loves every one without any reason. ದೇವರು ಎಲ್ಲರನ್ನು ಪ್ರೀತಿಸುತ್ತಾನೆ. ನಿಸರ್ಗ ಎಲ್ಲರನ್ನು ಸಮಾನವಾಗಿ ಕಾಣುತ್ತದೆ. ಬೆಳಕು ಎಲ್ಲರಿಗೂ ಚೆಲ್ಲುತ್ತದೆ, ನೀರು ಯಾರನ್ನೂ ಕುಡಿಯಬೇಡ ಅನ್ನಲಿಲ್ಲ, ಭೂಮಿ ಯಾರನ್ನೂ ನಡೆಯಬೇಡ ಎನ್ನಲಿಲ್ಲ. ಆದರೆ ಮನುಷ್ಯ? ಸಣ್ಣವನು. ದ್ವೇಷ ಮನಸ್ಸಿನ ವಿಕಾರ. ನಮ್ಮನ್ನು ನಾವೇ ದ್ವೇಷ ಮಾಡುತ್ತೇವೆ. ಜಗತ್ತಿನಲ್ಲಿ ನಾವು ಕಣ್ಣು, ಶಕ್ತಿ, ಬುದ್ಧಿ ಇರುವ ತನಕ ಸುಂದರವಾಗಿ ಬದುಕುವುದಕ್ಕಾಗಿ ಬಂದಿದ್ದೇವೆ. ಈ ಭಾವ ಬರಬೇಕಾದರೆ ಎಲ್ಲರನ್ನೂ ನಿರ್ಮಲ ಮನಸ್ಸಿನಿಂದ ಪ್ರೀತಿಸಲು ಕಲಿಯಬೇಕು. ಸುಂದರ ಭಾವನೆಗಳನ್ನು ಬೆಳೆಸಿಕೊಳ್ಳಬೇಕು. ಸದ್ಭಾವ ಯಾರನ್ನೂ ದ್ವೇಷಿಸುವುದಿಲ್ಲ.

## ಇ–ಸ್ಟ್ಯಾಂಪಿಂಗ್ ವಿಭಾಗದ ಇ–ಮೇಲ್ ಐಡಿಗಳ ವಿವರಗಳು

ಇ–ಸ್ಟ್ಯಾಂಪಿಂಗ್ ವಿಭಾಗಕ್ಕೆ ಸಂಬಂಧಿತ ವಿಷಯಗಳಿಗೆ ತಿಳಿಸಲಾದ ಮೇಲ್ ಐಡಿಗೆ ಮೇಲ್‌ಗಳನ್ನು ಕಳುಹಿಸುವುದು. ಕೆಳಗೆ ತಿಳಿಸಿರುವ ಇ–ಮೇಲ್ ಐಡಿಗಳ ಹೊರತಾಗಿ ಬೇರೆ ಇ–ಮೇಲ್ ಐಡಿಗಳಿಗೆ ಕಳುಹಿಸಿದಲ್ಲಿ, ಅವುಗಳನ್ನು ಪರಿಗಣಿಸುವುದಿಲ್ಲ.

| ಕ್ರ.ಸಂ. | ಇ–ಮೇಲ್ ಐಡಿ | ಸಂಬಂಧಿತ ವಿಷಯಗಳು |
|---|---|---|
| 1. | estamppassword.error@souharda.coop | ಪಾಸ್‌ವರ್ಡ್ ರಿಸೆಟ್, ಎರರ್ ರಿಪೋರ್ಟಿಂಗ್ ಸಂಬಂಧಿತ ವಿಷಯಗಳು. |
| 2. | estampid@souharda.coop | ಹೊಸ ಎಸಿಸಿ ಕೇಂದ್ರಗಳ ಪ್ರಾರಂಭದ ಕುರಿತು, ಹೊಸ ಐಡಿ, ಅಡಿಷನಲ್ ಐಡಿ/ ಐಡಿ ಡಿಆಕ್ಟಿವೇಟ್‌ಗೆ ಸಂಬಂಧಿತ ವಿಷಯಗಳು |
| 3. | estampaccount@souharda.coop | ಇ–ಸ್ಟ್ಯಾಂಪಿಂಗ್ ಲೆಕ್ಕಪತ್ರಗಳಿಗೆ ಸಂಬಂಧಿಸಿದ ವಿಷಯಗಳು, ಇ–ಸ್ಟ್ಯಾಂಪಿಂಗ್ ವ್ಯವಹಾರದ ಮೊತ್ತ (ವ್ಯವಹಾರ ಠೇವಣಿ, ಟಿಡಿಎಸ್, ಇಂಪ್ರೆಸ್ಟ್ ಬ್ಯಾಲೆನ್ಸ್ ಇತ್ಯಾದಿ) ಯಾವುದೇ ಕಾರಣಕ್ಕೂ ನಗದನ್ನು ರೂಪದಲ್ಲಿ ಮೊತ್ತವನ್ನು ಸಂದಾಯ ಮಾಡುವಂತಿಲ್ಲ |
| 4. | printercartridge@souharda.coop | ಪ್ರಿಂಟರ್, ಕಾಟ್ರೇಜ್ ಆರ್ಡರ್ ಮಾಡಲು (ಕಡ್ಡಾಯವಾಗಿ ಸೌಹಾರ್ದ ಸಹಕಾರಿ ಪೂರ್ಣ ಹೆಸರು, ವಿಳಾಸ, ಸಂಪರ್ಕಿಸಬೇಕಾದ ಸಿಬ್ಬಂದಿಯ ಹೆಸರು, ದೂರವಾಣಿ ಸಂಖ್ಯೆಗಳು, ಬೇಕಾಗಿರುವ ಪ್ರಿಂಟರ್ ಹಾಗೂ ಕಾಟ್ರೇಜ್‌ಗಳ ಸಂಖ್ಯೆಗಳು ನಮೂದಿಸಬೇಕು) |
| 5. | estamphelp@souharda.coop | ಮೇಲಿನ ವಿಷಯಗಳನ್ನು ಹೊರತುಪಡಿಸಿ ಇ–ಸ್ಟ್ಯಾಂಪಿಂಗ್‌ಗೆ ಸಂಬಂಧಿಸಿದ ಯಾವುದೇ ವಿಷಯಗಳು, ಪ್ರಶ್ನೆಗಳು ಮತ್ತು ಇತರೆ ವಿಷಯಗಳು. |

## ರಾಷ್ಟ್ರೀಯ ಸಹಕಾರ ಯೂನಿಯನ್‌ನ ಮುಖ್ಯಕಾರ್ಯನಿರ್ವಾಹಕರಾಗಿ ಶ್ರೀ ಸತ್ಯನಾರಾಯಣ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರವರಿಂದ ಅಭಿನಂದನೆ



**ರಾಷ್ಟ್ರೀಯ ಸಹಕಾರ ಯೂನಿಯನ್‌ನ ಮುಖ್ಯಕಾರ್ಯ ನಿರ್ವಾಹಕರಾಗಿ ಶ್ರೀ ಸತ್ಯನಾರಾಯಣ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರವರಿಂದ ಅಭಿನಂದನೆ.**

ರಾಷ್ಟ್ರೀಯ ಸಹಕಾರ ಯೂನಿಯನ್‌ನ ಮುಖ್ಯಕಾರ್ಯ ನಿರ್ವಾಹಕರಾಗಿ ಶ್ರೀ ಸತ್ಯನಾರಾಯಣರವರು ಅಧಿಕಾರ ವಹಿಸಿಕೊಂಡ ನಂತರ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಭೇಟಿ ಮಾಡಿ, ಅಭಿನಂದನೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯ ಚಟುವಟಿಕೆಗಳು ಮತ್ತು ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು. ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಸಹಕಾರಿಗಳ ಅಂತರರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ತರಬೇತಿ ಕಾರ್ಯಕ್ರಮಗಳಲ್ಲಿ ಹಾಗೂ ವಿದೇಶಗಳ ಪ್ರವಾಸ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅವಕಾಶ ಒದಗಿಸುವಂತೆ ವಿನಂತಿಸಿದರು.

ಶ್ರೀ ಸತ್ಯನಾರಾಯಣರವರು ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಹಾಗೂ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಶ್ರೀಯುತರು ಸೆಂಟ್ರಲ್ ಬೋರ್ಡ್ ಆಫ್ ಡೈರೆಕ್ಟ್ ಟ್ಯಾಕ್ಸ್‌ನ ಅಧ್ಯಕ್ಷರಾದ ಶ್ರೀ ಅತುಲೇಶ್ ಜಿಂದಾಲ್‌ರವರನ್ನು ಭೇಟಿ ಮಾಡಿ, ಸಹಕಾರಿಗಳಿಗೆ ಆದಾಯ ತೆರಿಗೆ ಇಲಾಖೆಯಿಂದ ಆಗುತ್ತಿರುವ ಕಿರುಕುಳವನ್ನು ತಪ್ಪಿಸಲು ಸೂಕ್ತ ಕ್ರಮವಿಡುವಂತೆ ವಿನಂತಿಸಿದರು.

## "ಸಮುದಾಯ ಹಾಗೂ ಸಹಕಾರದ ಅಭಿವೃದ್ಧಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪಾತ್ರ"ದ ಕುರಿತು ಸಲಹಾ ಸಭೆ

**ಮೈಸೂರು :** ದಿನಾಂಕ : 12.05.2016ರಂದು ಬೆಳಿಗ್ಗೆ 11:00 ಗಂಟೆಗೆ ಮೈಸೂರು ವಿಶ್ವವಿದ್ಯಾನಿಲಯದ ವಾಣಿಜ್ಯ ವಿಭಾಗದಲ್ಲಿ "ಸಮುದಾಯದ ಅಭಿವೃದ್ಧಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪಾತ್ರ"ದ ಕುರಿತು ಸಲಹಾ ಸಭೆಯನ್ನು ಆಯೋಜಿಸಲಾಗಿತ್ತು.



ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮೈಸೂರು ವಿಭಾಗೀಯ ಅಧಿಕಾರಿಯಾದ ಶ್ರೀ ಶಿವಕುಮಾರ ಬಿರಾದಾರ, ಪ್ರೊ. ಯಶವಂತ ಡೋಂಗ್ರೆ, ವಿಶ್ವವಿದ್ಯಾನಿಲಯದ ವಾಣಿಜ್ಯ ವಿಭಾಗದ ಪ್ರೊ. ಎಂ. ಇಂದಿರಾ, ಅರ್ಥಶಾಸ್ತ್ರ ವಿಭಾಗದ ಡಾ॥ ವಸಂತಕುಮಾರ, ಕೃಷಿ ಜ್ಞಾನ ವಿಜ್ಞಾನ ವೇದಿಕೆ ಸಂಸ್ಥಾಪಕರಾದ ಶ್ರೀ ರಾಯ್ ಡೇವಿಡ್, ಕೃಷಿ ವಿಶ್ವವಿದ್ಯಾನಿಲಯ, ಭಾರತೀಯ ಸಾಮಾಜಿಕ ವಿಜ್ಞಾನ ಸಮ್ಮೇಳನ, ಪ್ರಥಮ ಸಂಸ್ಥೆ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಹಾಗೂ ಇತರೆ ಸರ್ಕಾರ ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳಿಂದ 25 ಜನ ಮುಖ್ಯಸ್ಥರು ಹಾಜರಿದ್ದರು.

ಈ ಸಭೆಯಲ್ಲಿ ಸಮುದಾಯದ ಅಭಿವೃದ್ಧಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಸಾಮಾಜಿಕ ಚಟುವಟಿಕೆಗಳಲ್ಲಿ ಹಾಗೂ ಸಹಕಾರ ಕ್ಷೇತ್ರದ ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳುವುದು ಮತ್ತು ಆಯೋಜಿಸಬಹುದಾದ ಕಾರ್ಯಕ್ರಮಗಳ ಕುರಿತು ಚರ್ಚಿಸಲಾಯಿತು.

## ಸಂಯುಕ್ತ ಸಹಕಾರಿಯ ಬೆಂಗಳೂರು ವಿಭಾಗೀಯ ಕಛೇರಿಯ ನೇತೃತ್ವದಲ್ಲಿ ಹೊಸ ಸೌಹಾರ್ದ ಸಹಕಾರಿಗಳ ಪ್ರವೇಶ ತರಬೇತಿ ಶಿಬಿರ

# ಸೌಹಾರ್ದ ಸಹಕಾರಿ ಕ್ಷೇತ್ರದ ಮಾಹಿತಿ ಹಾಗೂ ಸಹಕಾರಿಗಳ ಕಾರ್ಯಚಟುವಟಿಕೆಗಳ ಮಾಹಿತಿಗಾಗಿ ತರಬೇತಿ - ಶ್ರೀ ಶರಣಗೌಡ ಜಿ. ಪಾಟೀಲ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಬೆಂಗಳೂರು ವಿಭಾಗದಲ್ಲಿ ಕಳೆದ ವರ್ಷದಿಂದ ಇತ್ತೀಚಿನವರೆಗೆ ನೋಂದಣೆಯಾಗಿ ಕಾರ್ಯನಿರ್ವಹಿಸುತ್ತಿರುವ ಹೊಸ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯ ನಿರ್ವಾಹಕರುಗಳಿಗಾಗಿ ಪ್ರವೇಶ ತರಬೇತಿ ಕಾರ್ಯಕ್ರಮವನ್ನು ದಿನಾಂಕ : 20 ಮೇ 2016ರಂದು ಬೆಂಗಳೂರಿನ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಪ್ರತಿವರ್ಷ ರಾಜ್ಯದಲ್ಲಿ 350 ರಿಂದ 400ರವರೆಗೆ ಹೊಸ ಸೌಹಾರ್ದ ಸಹಕಾರಿಗಳು ನೋಂದಣೆಯಾಗುತ್ತಿವೆ. ಅವುಗಳ ಕಾರ್ಯನಿರ್ವಹಣೆ ಸುಲಭವಾಗಬೇಕಾದರೆ ಅವರುಗಳಿಗೆ ಸೌಹಾರ್ದ ಸಹಕಾರಿ ಕ್ಷೇತ್ರದ ಮೂಲ ಮಾಹಿತಿಯನ್ನು ಒದಗಿಸುವುದೇ ಪ್ರವೇಶ ತರಬೇತಿಯ ಉದ್ದೇಶ. ಅವರುಗಳಿಗೆ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಾಚರಣೆ, ಸೌಹಾರ್ದ ಸಹಕಾರಿ ಕಾಯ್ದೆಯ ಆಶಯ ಮತ್ತು ಪ್ರಮುಖ ಅಂಶಗಳು, ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು, ನಿರ್ದೇಶಕರ ಮುಖ್ಯ ಕಾರ್ಯನಿರ್ವಾಹಕರ ಕರ್ತವ್ಯ ಹಾಗೂ ಜವಾಬ್ದಾರಿಗಳ ಬಗ್ಗೆ ತಿಳಿದಿರುವುದು ಅವಶ್ಯಕ. ಅದಕ್ಕಾಗಿ ಪ್ರತಿವರ್ಷ ಈ ರೀತಿಯ ಪ್ರವೇಶ ತರಬೇತಿಗಳನ್ನು ರಾಜ್ಯದ 4 ವಿಭಾಗಗಳಲ್ಲೂ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪ್ರಾದೇಶಿಕ



ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಉಪನಿರ್ದೇಶಕರಾದ ಶ್ರೀ ಗಣೇಶರವರು, ಸಂಯುಕ್ತ ಸಹಕಾರಿಯ ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ ಹಾಗೂ ತರಬೇತಿ ಅಧಿಕಾರಿಯಾದ ಶ್ರೀ ವಿ.ಜಿ.ಕಾರಕೂನರವರು ಉಪಸ್ಥಿತರಿದ್ದರು. ಬೆಂಗಳೂರು ವಿಭಾಗೀಯ ಅಧಿಕಾರಿಯಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಸ್ವಾಗತ ಕೋರಿದರು.

ಕಿರಿಯ ಅಧಿಕಾರಿಯಾದ ಶ್ರೀ ಅನಿಲ್‌ರವರು ವಂದನಾರ್ಪಣೆ ಸಲ್ಲಿಸಿದರು. ಶ್ರೀ ಶ್ರೀಕಾಂತ ಬರುವೆ, ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ಡಾ. ಎಸ್.ಎ.ಸಿದ್ಧಾಂತಿಯವರುಗಳು ವಿವಿಧ ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು. ಬೆಂಗಳೂರು ವಿಭಾಗದ 18 ಸೌಹಾರ್ದ ಸಹಕಾರಿಗಳಿಂದ 43 ಪ್ರತಿನಿಧಿಗಳು ಭಾಗವಹಿಸಿ, ಪ್ರಯೋಜನ ಪಡೆದರು. ಕಾರ್ಯಕ್ರಮ ಉತ್ತಮ ಹಾಗೂ ಸಕಾಲಿಕವಾಗಿತ್ತೆಂದು ಪ್ರತಿನಿಧಿಗಳು ಅಭಿಪ್ರಾಯ ವ್ಯಕ್ತಪಡಿಸಿದರು.



## ಕಲಬುರಗಿಯ ವಿಶ್ವಸೃಷ್ಠಿ ಸೌಹಾರ್ದ ಪತ್ತಿನ ಸಹಕಾರಿಗೆ ಭೇಟಿ

ವಿಶ್ವಸೃಷ್ಠಿ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ ಸಹಕಾರಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಭೇಟಿ ನೀಡಿದ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಸವರಾಜ್‌ರವರಿಂದ ಸನ್ಮಾನ. ಈ ಸಂದರ್ಭದಲ್ಲಿ ಕಲಬುರಗಿ ವಿಭಾಗೀಯ ಅಧಿಕಾರಿಯಾದ ಶ್ರೀ ಸಂಜಯ ಕೋರಟಕರರವರು ಉಪಸ್ಥಿತರಿದ್ದರು.

## ವಿಷಯ ತಜ್ಞರ ಸಭೆ

## ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳು ಉತ್ತಮ ಗುಣಮಟ್ಟದ್ದಾಗಿವೆ - ವಿಷಯ ತಜ್ಞರ ಅಭಿಪ್ರಾಯ ತರಬೇತಿ ಕಾರ್ಯಕ್ರಮಗಳು ಅವಶ್ಯಕತೆಗನುಗುಣವಾಗಿ ಹಾಗೂ ಗುಣಾತ್ಮಕವಾಗಿ ಇರಬೇಕು ಎಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆ - ಶ್ರೀ ಗುರುನಾಥ ಜಾಂತಿಕರ



ದಿನಾಂಕ 04 ಜೂನ್ 2016ರಂದು ಬೆಂಗಳೂರಿನ ಬಸಂತ್ ರೆಸಿಡೆನ್ಸಿಯಲ್ಲಿ ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರುವ ಹಾಗೂ ಸಂಪರ್ಕದಲ್ಲಿರುವ ಸಂಪನ್ಮೂಲ ವ್ಯಕ್ತಿಗಳ ಸಭೆಯನ್ನು ಏರ್ಪಡಿಸಲಾಗಿತ್ತು.

ಈ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರವರು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿ, ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಸಂಯುಕ್ತ ಸಹಕಾರಿಯು ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಚಳುವಳಿ ಪ್ರಾರಂಭವಾಗಿ 15 ವರ್ಷಗಳು ಕಳೆದಿವೆ. ಈ ಅವಧಿಯಲ್ಲಿ 3650ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು ನೋಂದಣಿಗೊಂಡು ಕಾರ್ಯನಿರ್ವಹಿಸುತ್ತಿವೆ. ಈ ಎಲ್ಲಾ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗಾಗಿ ಅವರುಗಳ ಅವಶ್ಯಕತೆಗನುಗುಣವಾಗಿ ಗುಣಮಟ್ಟದ ತರಬೇತಿಯನ್ನು ನೀಡುವುದು ಸಂಯುಕ್ತ ಸಹಕಾರಿಯ ಅಪೇಕ್ಷೆಯಾಗಿದೆ. ಅದರಂತೆ ಕಳೆದ ಹಲವಾರು ವರ್ಷಗಳಿಂದ ಉತ್ತಮ ಗುಣಮಟ್ಟದ ತರಬೇತಿಗಳನ್ನು ಸಂಘಟಿಸಿ, ನಿರ್ವಹಿಸಲಾಗಿದೆ. ಈ ಎಲ್ಲಾ ತರಬೇತಿಗಳು ಅತ್ಯಂತ ಉನ್ನತ ಮಟ್ಟದ್ದು ಹಾಗೂ ಉತ್ತಮ ಗುಣಮಟ್ಟದ್ದು ಎಂಬುದಾಗಿ ಸಾರ್ವಜನಿಕ ಹಾಗೂ ಸಹಕಾರಿ ವಲಯದಲ್ಲಿ ಅಭಿಪ್ರಾಯಪಡಲಾಗಿದೆ.

ಈ ಎಲ್ಲಾ ಶ್ರೇಯಸ್ಸು ಸಂಪನ್ಮೂಲ ವ್ಯಕ್ತಿಗಳಿಗೆ ಸಲ್ಲುತ್ತದೆ ಎಂದು ತಿಳಿಸಿದರು ಹಾಗೂ ಮುಂಬರುವ ದಿನಗಳಲ್ಲಿ ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳು ಯಾವ ರೀತಿಯಲ್ಲಿ ಮುನ್ನಡೆಯಬೇಕು ಎಂಬುದಕ್ಕೆ ತಮ್ಮ ಸಲಹೆ ಹಾಗೂ ಮಾರ್ಗದರ್ಶನಗಳನ್ನು ನೀಡಲು ಕೋರಿದರು.

ಪ್ರಾರಂಭದಲ್ಲಿ ಶ್ರೀಮತಿ ಸವಿತಾ.ಎನ್.ಇ.ರವರಿಂದ ಪ್ರಾರ್ಥನೆಯಾದ ನಂತರ ಶ್ರೀ ವೈ.ಕುಮಾರ್‌ರವರು ಅತಿಥಿ ಗಣ್ಯರನ್ನು ಸ್ವಾಗತಿಸಿದರು. ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಪ್ರಾಸ್ತಾವಿಕ ಭಾಷಣ ಮಾಡಿದರು. ಸಭೆಯಲ್ಲಿ ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರು ಶ್ರೀ ಸಿ.ಎನ್.ಪರಶಿವಮೂರ್ತಿ, ಸಹಕಾರ ಚುನಾವಣಾ ಪ್ರಾಧಿಕಾರದ ಕಾರ್ಯದರ್ಶಿಯಾದ ಶ್ರೀ ಬಿ.ಹೆಚ್.ಮಂಜಪ್ಪ, ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀಮತಿ ಹೆಚ್.ಸಿ.ನಾಗರತ್ನ, ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಸಂಯುಕ್ತ ಸಹಕಾರಿಯ ಶಿಕ್ಷಣ ನಿಧಿ ಸಲಹಾ ಸಮಿತಿಯ ಸದಸ್ಯರುಗಳಾದ ಶ್ರೀ ಬಿ.ಎಸ್.ಸುಲ್ತಾನಪುರಿ ಹಾಗೂ ಶ್ರೀ ವಸಂತನಾಯಕ, ಸಹಕಾರ ಸಂಘಗಳ ಅಪರ ನಿಬಂಧಕರುಗಳಾದ ಶ್ರೀ ಕೆ.ಎಸ್.ನವೀನ್, ಶ್ರೀ ಎಸ್.ಎನ್.ಅರುಣ್ ಕುಮಾರ್, ಬ್ಯಾಂಕಿಂಗ್ ಕ್ಷೇತ್ರದ, ಮಾನವ ಸಂಪನ್ಮೂಲ ಕ್ಷೇತ್ರದ, ಸಹಕಾರ ಕ್ಷೇತ್ರದ 49 ವಿಷಯ ತಜ್ಞರುಗಳು, ಸಂಯುಕ್ತ ಸಹಕಾರಿಯ 10 ಅಧಿಕಾರಿಗಳು ಸೇರಿದಂತೆ ಒಟ್ಟಾರೆ 59 ಜನರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ, ತಮ್ಮ ಅಭಿಪ್ರಾಯವನ್ನು ಮಂಡಿಸಿದರು.

### ಶ್ರೀ ಬಿ.ಹೆಚ್. ಮಂಜಪ್ಪನವರಿಗೆ ಬೀಳ್ಕೊಡುಗೆ



ಸಹಕಾರ ಇಲಾಖೆಯ ಹಿರಿಯ ಅಧಿಕಾರಿ ಹಾಗೂ ಸಹಕಾರ ಚುನಾವಣಾ ಪ್ರಾಧಿಕಾರದ ಕಾರ್ಯದರ್ಶಿಯಾದ ಶ್ರೀ ಬಿ.ಹೆಚ್. ಮಂಜಪ್ಪನವರು ನಿವೃತ್ತಿ ಹೊಂದುತ್ತಿರುವ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಪರವಾಗಿ ಹಾಗೂ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಪರವಾಗಿ ಮತ್ತು ಸಂಪನ್ಮೂಲ ವ್ಯಕ್ತಿಗಳ ಪರವಾಗಿ ಹಾರ್ದಿಕವಾಗಿ ಅವರಿಗೆ ಬೀಳ್ಕೊಡುಗೆಯನ್ನು ನೆರವೇರಿಸಲಾಯಿತು. ಶ್ರೀಯುತರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ ಹಾಗೂ ಹಿರಿಯರಾದ ಶ್ರೀ ಸಿ.ಎನ್.ಪರಶಿವಮೂರ್ತಿಯವರು ನೆನಪಿನ ಕಾಣಿಕೆ ನೀಡಿ, ಹಾರ ಹಾಕಿ ಸನ್ಮಾನಿಸಿದರು. ಶ್ರೀಯುತರ ಬಗ್ಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರು ಹಾಗೂ ಶ್ರೀ ಸಿ.ಎನ್.ಪರಶಿವಮೂರ್ತಿಯವರು ಮಾತನಾಡಿ, ಸಹಕಾರ ಇಲಾಖೆಯಲ್ಲಿ ಅತ್ಯಂತ ಪ್ರಾಮಾಣಿಕ ಹಾಗೂ ದಕ್ಷ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾರೆ ಎಂದು ತಿಳಿಸಿದರು.

# "ಶಾಖೆಗಳ ನಿರ್ವಹಣೆ ಹಾಗೂ ಗ್ರಾಹಕರ ಸೇವೆಗಳ ವಿಷಯಗಳು" ಬಗ್ಗೆ ತರಬೇತಿ ಕಾರ್ಯಕ್ರಮ



**ಚಿಕ್ಕೋಡಿ, ಅಥಣಿ ಹಾಗೂ ರಾಯಭಾಗ ತಾಲ್ಲೂಕುಗಳು** : ಬೆಳಗಾವಿ ಜಿಲ್ಲೆಯ ಚಿಕ್ಕೋಡಿ, ಅಥಣಿ ಹಾಗೂ ರಾಯಭಾಗ ತಾಲ್ಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ದಿನಾಂಕ 30 ಮೇ 2016ರಂದು ಹೋಟೆಲ್ ಹುಲಿಗೆಮ್ಮ ರೆಸಿಡೆನ್ಸಿ, ಚಿಕ್ಕೋಡಿಯಲ್ಲಿ ಏರ್ಪಡಿಸಲಾಗಿದ್ದ "ಶಾಖೆಗಳ ನಿರ್ವಹಣೆ ಹಾಗೂ ಗ್ರಾಹಕರ ಸೇವೆಗಳ ವಿಷಯಗಳ" ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ, ಮಾತನಾಡಿದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಯಾನಂದ ಬಿ. ಜಾಧವರವರು ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಉತ್ತಮ ಹಾಗೂ ಗುಣಮಟ್ಟ ಸೇವೆಗಳನ್ನು ಒದಗಿಸುವ ಸಂಸ್ಥೆಗಳು ಮಾತ್ರ ಸದೃಢವಾಗಿ ಬೆಳೆಯಬಲ್ಲವು.

ಸೌಹಾರ್ದ ಸಹಕಾರಿಗಳು ಸಮಾಜಕ್ಕೆ ಉತ್ತಮ ಸೇವೆ ಮತ್ತು ಆರ್ಥಿಕ ಸಹಾಯ ಒದಗಿಸುವಲ್ಲಿ ಸಹಕಾರಿ ಕ್ಷೇತ್ರದಲ್ಲಿಯೇ ಹೆಸರುವಾಸಿಯಾಗಿದೆ. ಇದರಿಂದಾಗಿ ಕರ್ನಾಟಕದಲ್ಲಿ 3700 ಮೇಲ್ಪಟ್ಟು ಸೌಹಾರ್ದ ಸಹಕಾರಿಗಳು ಕೆಲವೇ ಅವಧಿಯಲ್ಲಿ ನೋಂದಣಿ ಹೊಂದಿ, ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಉತ್ತಮ ಗ್ರಾಹಕರ ಸೇವೆಯಿಂದ ಸೌಹಾರ್ದ ಸಹಕಾರಿಗಳು ಪ್ರಗತಿ ಹೊಂದಲು ಸಾಧ್ಯ ಎಂದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಚಿಕ್ಕೋಡಿ ಉಪವಿಭಾಗದ ಸಹಾಯ ನಿಬಂಧಕರು, ಸಹಕಾರ ಸಂಘಗಳು ಹಾಗೂ ತರಬೇತಿಯ ಉಪನ್ಯಾಸಕರಾದ ಶ್ರೀ ಬಿ.ಎ.ಮಹದೇವಪ್ಪರವರು ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಶ್ರೀಕಾಂತ ಹತನೂರೆರವರು ಉಪಸ್ಥಿತರಿದ್ದ ಎಲ್ಲಾ ಸಹಕಾರಿಗಳ ಕಾರ್ಯನಿರ್ವಾಹಕರಿಗೆ ತರಬೇತಿಯ ಪ್ರಯೋಜನವನ್ನು ಪಡೆಯಬೇಕೆಂದು ಸಲಹೆ ನೀಡಿದರು.

**ಹುಕ್ಕೇರಿ ತಾಲ್ಲೂಕು** : ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ದಿನಾಂಕ 31 ಮೇ 2016ರಂದು ಕನ್ನಡ ಸಾಹಿತ್ಯ ಭವನ, ಚನ್ನಮ್ಮ ವೃತ್ತ, ಬೆಳಗಾವಿಯ ಸಭಾ ಭವನದಲ್ಲಿ ಏರ್ಪಡಿಸಲಾಗಿದ್ದ "ಶಾಖೆಗಳ ನಿರ್ವಹಣೆ ಹಾಗೂ ಗ್ರಾಹಕರ ಸೇವೆಗಳ ವಿಷಯಗಳ" ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಯಾನಂದ ಬಿ. ಜಾಧವರವರು ಸಹಕಾರಿಗಳ ಅಭಿವೃದ್ಧಿ ಮತ್ತು ಉತ್ತಮ ಗ್ರಾಹಕರ ಸೇವೆಗೆ ತರಬೇತಿ ಅವಶ್ಯಕ ಎಂದು ತಿಳಿಸಿದರು.



ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಗಂಗಾಧರ ಟಿ. ಗಚ್ಚಿ, ಬೆಳಗಾವಿ ಉಪವಿಭಾಗದ ಸಹಾಯಕ ನಿಬಂಧಕರು, ಸಹಕಾರ ಸಂಘಗಳು ಇವರು ಸಹಕಾರಿಗಳಿಗೆ ವೇಳೆಗೆ ಸರಿಯಾಗಿ ಚುನಾವಣೆಗಳನ್ನು ಜರುಗಿಸಬೇಕು ಮತ್ತು ಆರೋಗ್ಯ ವಿಮಾ ಯಶಸ್ವಿನಿ ಯೋಜನೆಯ ಪ್ರಯೋಜನವನ್ನು ಎಲ್ಲಾ ಸದಸ್ಯರಿಗೆ ಸಹಕಾರಿಗಳು ಒದಗಿಸಬೇಕೆಂದು ಸಲಹೆ ನೀಡಿದರು.

# ಸಹಕಾರಿಯ ಉದ್ಘಾಟನೆ

ವಿಶ್ವಗುರು ಬಸವಣ್ಣ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಬೆಂಗಳೂರು ನೂತನ ಸಹಕಾರಿಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರಿಂದ ಉದ್ಘಾಟನೆ. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ನೊಣವಿನಕೆರೆ ಶ್ರೀ ಕಾಡಸಿದ್ಧೇಶ್ವರ ಮಠಾಧ್ಯಕ್ಷರಾದ ಶ್ರೀ ಕರಿವೃಷಭ ಶಿವಯೋಗೀಶ್ವರ ಮಹಾಸ್ವಾಮೀಜಿ ಮತ್ತು ಶಿವಗಂಗಾ ಕ್ಷೇತ್ರದ ಶ್ರೀ ಮೇಲಣಗವಿ ವೀರಸಂಸ್ಥಾನ ಮಠದ ಅಧ್ಯಕ್ಷರಾದ ಪಟ್ಟದ ಶ್ರೀ ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿಯವರು ವಹಿಸಿದ್ದರು.



ಶ್ರೀ ಜಿ.ಕರಿಬಸಪ್ಪ, ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ) ಮತ್ತು ಬೆಂಗಳೂರು ಮಹಾನಗರ ಪಾಲಿಕೆಯ ಮಾಜಿ ಮಹಾಪೌರರೂ ಹಾಲಿ ಸದಸ್ಯರೂ ಆದ ಶ್ರೀಮತಿ ಶಾಂತಕುಮಾರಿ ರವಿಕುಮಾರ್ ಹಾಗೂ ಪಾಲಿಕೆ ಸದಸ್ಯರುಗಳಾದ ಶ್ರೀ ಉಮೇಶ್ ಶೆಟ್ಟಿ, ಶ್ರೀ ಮೋಹನ್ ಕುಮಾರ್ (ನಾಗರಬಾವಿ), ಶ್ರೀ ದಾಸೇಗೌಡ (ಮೂಡಲಪಾಳ್ಯ), ಶ್ರೀಮತಿ ತೇಜಸ್ವಿನಿ ಸೀತಾರಾಮಯ್ಯ (ಜ್ಞಾನ ಭಾರತಿ) ಮತ್ತು ಶ್ರೀ ಮೋಹನ್ ಕುಮಾರ್ (ಕೊಟ್ಟಿಗೆಪಾಳ್ಯ) ಇವರುಗಳು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ.ಸಿ.ಪಾಲನೇತ್ರಪ್ಪ ಅವರು ವಹಿಸಿದ್ದರು.



ಜೈ ಶ್ರೀ ಅಂಬೆ ದುರ್ಗಾಮಾತ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಸದಾಶಿವಗಡ, ಕಾರವಾರ ಸಹಕಾರಿಯ ಇ–ಸ್ಟ್ಯಾಂಪಿಂಗ್ ಕೇಂದ್ರವನ್ನು ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಿಂಗರಾಜ ಪುತ್ತು ಕಲ್ಗುಟಕರ್ ಇವರಿಂದ ಉದ್ಘಾಟನೆ.



ಆಶೀರ್ವಾದ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಳಗಾವಿ ಸಹಕಾರಿಯ ಧುಪದಾಳ–ಘಟಪ್ರಭಾ ಶಾಖೆಯ ಸ್ಥಳಾಂತರ ಹಾಗೂ ಇ–ಸ್ಟ್ಯಾಂಪಿಂಗ್ ಕೇಂದ್ರದ ಉದ್ಘಾಟನೆಯನ್ನು ಪರಮ ಪೂಜ್ಯ ಶ್ರೀ ಬಸವ ಪ್ರಭು ಮಹಾರಾಜರು, ಚಿಂಚಣಿ (ಮಜಲಟ್ಟಿ) ಇವರ ಅಮೃತ ಹಸ್ತದಿಂದ ಉದ್ಘಾಟನೆ.



ಮನಿಪ್ಲಾಂಟ್ ಮಲ್ಟಿಪರ್ಪಸ್ ಸೌಹಾರ್ದ ಕೋ–ಆಪರೇಟಿವ್ ನಿ., ದಾವಣಗೆರೆ ಸಹಕಾರಿಯ ಪ್ರಥಮ ಶಾಖೆಯ ಪ್ರಾರಂಭೋತ್ಸವವು ದಾವಣಗೆರೆಯಲ್ಲಿ ಶ್ರೀ ಷ॥ಬ್ರ॥ ಓಂಕಾರ ಶಿವಾಚಾರ್ಯ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ, 'ಸಹಕಾರ ರತ್ನ' ಶ್ರೀ ಎನ್.ಜೆ.ಬಿ.ಆರಾಧ್ಯರವರಿಂದ ಉದ್ಘಾಟನೆ. ಮುಖ್ಯ ಅತಿಥಿಗಳಾಗಿ ಶ್ರೀಮತಿ ಅಶ್ವಿನಿ ಪ್ರಶಾಂತ್, ಮಹಾಪೌರರು, ಶ್ರೀ ಶಿವನಹಳ್ಳಿ ರಮೇಶ್, ಸದಸ್ಯರು, ಮಹಾನಗರ ಪಾಲಿಕೆ, ದಾವಣಗೆರೆ ಇವರುಗಳು ಆಗಮಿಸಿದ್ದರು.

## ಉದಯ ಸೌಹಾರ್ದ ಪತ್ತಿನ ಸಹಕಾರಿಯ ಭೂಮಿ ಪೂಜೆ

ಉದಯ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಂಗಳೂರು ಸಹಕಾರಿಯು ನೂತನವಾಗಿ ಸುಮಾರು ರೂ.4.05 ಕೋಟಿ ವೆಚ್ಚದಲ್ಲಿ ಖರೀದಿಸಿರುವ ಮೌಂಟ್ ಜಾಯ್ ರಸ್ತೆ, ಹನುಮಂತನಗರ, ಬೆಂಗಳೂರು-19 ಇಲ್ಲಿ ಸ್ವಂತ ಕಟ್ಟಡಕ್ಕಾಗಿ ಶಂಕುಸ್ಥಾಪನೆ ಹಾಗೂ ಭೂಮಿ ಪೂಜೆಯನ್ನು ದಿನಾಂಕ 25.04.2016ರಂದು ನೆರವೇರಿಸಲಾಯಿತು.



## ಸಹಕಾರಿ ಇನ್ನೂ ಉತ್ತಮ ಮಟ್ಟದಲ್ಲಿ ಬೆಳೆಯಲಿ – ಶ್ರೀ ಎಂ.ಕೆ.ಅಯ್ಯಪ್ಪ



ಭೂಮಿ ಪೂಜೆಯನ್ನು ನೆರವೇರಿಸಿ, ಮಾತನಾಡಿದ ಶ್ರೀ ಎಂ.ಕೆ.ಅಯ್ಯಪ್ಪರವರು ಸಹಕಾರ ಸಂಸ್ಥೆಗಳು ಸಮಾಜಕ್ಕೆ ನೀಡುತ್ತಿರುವ ಸೇವೆಗಳನ್ನು ಶ್ಲಾಘಿಸಿ, ಉದಯ ಸೌಹಾರ್ದ ಪತ್ತಿನ ಸಹಕಾರಿಯು ಇತರರಿಗೆ ಮಾದರಿಯಾದ ಸಂಸ್ಥೆ. ಸದಾಕಾಲ ಸಾಮಾಜಿಕ ಕಾರ್ಯಕ್ರಮ ಮತ್ತು ಸದಸ್ಯರಿಗೆ ಉತ್ತಮ ಸೇವೆ ಒದಗಿಸುವಲ್ಲಿ ಮುಂಚೂಣಿಯಲ್ಲಿರುವ ಸಂಸ್ಥೆ. ಇದು ಇನ್ನೂ ಉತ್ತಮ ಮಟ್ಟದಲ್ಲಿ ಬೆಳೆಯಲಿ ಎಂದು ಹಾರೈಸಿದರು.

ಮುಖ್ಯ ಅತಿಥಿಗಳಾಗಿ ಬಿ.ಬಿ.ಎಂ.ಪಿ. ವಿದ್ಯಾಪೀಠ ವಾರ್ಡ್‌ನ ಸದಸ್ಯರಾದ ಶ್ರೀಮತಿ ಶ್ಯಾಮಲ ಕುಮಾರ್ ಎಂ. ರವರು ಭಾಗವಹಿಸಿದ್ದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶ್ರೀ ಬಿ.ಎಸ್. ಗುಂಡುರಾವ್ ರವರು ಮಾತನಾಡುತ್ತಾ, ಸಹಕಾರಿಗೆ ಸ್ವಂತ ಕಟ್ಟಡ ಹೊಂದಬೇಕೆನ್ನುವ ಕನಸು ಬಹಳ ವರ್ಷಗಳಿಂದ ಇತ್ತು. ಸುಮಾರು ರೂ.4.05 ಕೋಟಿ ವೆಚ್ಚದಲ್ಲಿ ನಿವೇಶನ ಖರೀದಿಸಲಾಗಿದೆ. ಈ ಸ್ಥಳದಲ್ಲಿ ಇನ್ನೂ 1.5 ವರ್ಷದಲ್ಲಿ ನೂತನ ಕಟ್ಟಡ ನಿರ್ಮಾಣವಾಗುತ್ತದೆ.

ಇದರಲ್ಲಿ ಎಲ್ಲಾ ಸದಸ್ಯ ಬಂಧುಗಳ, ಆಡಳಿತ ಮಂಡಲಿಯವರ ಹಾಗೂ ಸಿಬ್ಬಂದಿ ವರ್ಗದವರ ಶ್ರಮ ಇರುತ್ತದೆ. ಇನ್ನೂ ಮುಂದೆಯೂ ಸಹ ಇದೇ ರೀತಿಯಲ್ಲಿ ಸಹಕಾರ ಇಲಾಖೆ, ಸೌಹಾರ್ದ ಸಹಕಾರ ಇಲಾಖೆ ಹಾಗೂ ಮುಖ್ಯವಾಗಿ ಸದಸ್ಯ ಬಂಧುಗಳ, ಆಡಳಿತ ಮಂಡಲಿಯವರ ಸಹಕಾರವನ್ನು ಕೋರುತ್ತಾ ಈ ಸಂಸ್ಥೆಯನ್ನು ಇನ್ನೂ ಉತ್ತಮ ಮಟ್ಟಕ್ಕೆ ಬೆಳೆಸಲಾಗುವುದು ಎಂದು ಭರವಸೆ ನೀಡಿದರು. ವಿಶೇಷ ಆಹ್ವಾನಿತರಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ನಾಗರತ್ನ ಹೆಚ್.ಸಿ., ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ವೈ.ಕುಮಾರ್‌ರವರು ಭಾಗವಹಿಸಿದ್ದರು.



### ಮಾದರಿ ಸಂಸ್ಥೆಯಾಗಿ ಬೆಳೆಯಲಿ – ಶ್ರೀ ರವಿ ಸುಬ್ರಮಣ್ಯ

ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಬಸವನಗುಡಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಎಲ್.ಎ.ರವಿಸುಬ್ರಮಣ್ಯ ರವರು ಉದಯ ಸೌಹಾರ್ದ ಸಂಸ್ಥೆಯು ಈ ಭಾಗದಲ್ಲಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ಆರ್ಥಿಕವಾಗಿ ಸುಭದ್ರವಾಗಿದ್ದು, ಅನೇಕ ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಸದಸ್ಯರಿಗೆ ಪ್ರತೀ ವರ್ಷ ಡಿವಿಡೆಂಡ್ ನೀಡುತ್ತಿದೆ. ಈಗ ಸ್ವಂತ ಕಟ್ಟಡ ನಿರ್ಮಾಣ ಮಾಡುತ್ತಿರುವುದು ನಮಗೆಲ್ಲಾ ಸಂತೋಷದ ವಿಷಯವಾಗಿದೆ. ಈ ಸಂಸ್ಥೆಯ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ನಮ್ಮ ಕಡೆಯಿಂದ ಎಲ್ಲಾ ರೀತಿಯ ಸಹಕಾರ ನೀಡಲಾಗುವುದು. ನಮ್ಮ ಭಾಗದಲ್ಲಿರುವ ಈ ಸಂಸ್ಥೆಯು ಇನ್ನೂ ಹೆಚ್ಚಿನ ಹೆಸರು ಗಳಿಸಿ, ಇಡೀ ರಾಜ್ಯಕ್ಕೆ ಮಾದರಿ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸಿದರು.

## ಅರಿಹಂತ ಅರ್ಬನ್ ಸೌಹಾರ್ದ ಕ್ರೆಡಿಟ್ ಸಹಕಾರಿ ಅ., ಹುಲ್ಲೋಳಿ ಸಹಕಾರಿಯ ಪ್ರಗತಿಯ ಪಕ್ಷಿನೋಟ (ದಿ : 31.03.2016 ಇದ್ದಂತೆ)

| | |
|---|---|
| ಸದಸ್ಯರ ಸಂಖ್ಯೆ | 3193 |
| ವಸೂಲಾದ ಶೇರು ಬಂಡವಾಳ | 43,77,000.00 |
| ಕಾಯ್ದಿಟ್ಟ ನಿಧಿ ಹಾಗೂ ಇತರ ನಿಧಿಗಳು | 4,75,07,990.26 |
| ಠೇವುಗಳು | 57,33,13,787.65 |
| ಗುಂತಾವಣೆಗಳು | 18,66,11,960.00 |

| | |
|---|---|
| ದುಡಿಯುವ ಬಂಡವಾಳ | 63,46,32,995.29 |
| ಸಾಲಗಳು | 40,61,08,461.00 |
| ನಿವ್ವಳ ಲಾಭ | 92,31,930.54 |
| ಸಾಲ ವಸೂಲಿ | 99% |
| ಒಟ್ಟು ವಹಿವಾಟು | 376,63,07,724.47 |

# ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್‌ನ ವರ್ಷಾಚರಣೆ ಕಾರ್ಯಕ್ರಮ




ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಪುತ್ತೂರು ಸಹಕಾರಿಯ ಸಹಸಂಸ್ಥೆಯಾದ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ (ರಿ.) ಪುತ್ತೂರು ಇದು ಒಂದು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ವರ್ಷಾಚರಣೆ ಕಾರ್ಯಕ್ರಮವು ದಿನಾಂಕ 23 ಮೇ 2016ರಂದು ಭಾರತ ಸೇವಾಶ್ರಮ (ರಿ.) ಕನ್ಯಾನದಲ್ಲಿ ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿಯಾದ ಶ್ರೀ ಎಸ್.ಆರ್.ಸತೀಶ್ಚಂದ್ರರವರು ಮಾತನಾಡಿ ಸೇವಾಶ್ರಮದ ಸಂಸ್ಥಾಪಕರಾದ ಶ್ರೀ ಧೀರೇಂದ್ರನಾಥ ಭಟ್ಟಾಚಾರ್ಯರ ಸೇವೆಯನ್ನು ಶ್ಲಾಘಿಸಿದರು ಹಾಗೂ ಹಿರಿಯರ ಮಾರ್ಗದರ್ಶನ ಯುವಜನತೆಗೆ ಅಡಿಪಾಯವಿದ್ದಂತೆ ಎಂದು ಹೇಳಿದರು.

ವೇದಿಕೆಯಲ್ಲಿ ಟ್ರಸ್ಟ್‌ನ ಟ್ರಸ್ಟಿ ಶ್ರೀ ಚಂದ್ರಶೇಖರ ನಾಯಕ್ ಶೇರಮೆ, ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ನಿರ್ದೇಶಕರಾದ ಶ್ರೀ ದೇವಿಪ್ರಸಾದ್ ಕಲ್ಲಾಜೆ, ಭಾರತ ಸೇವಾಶ್ರಮದ ಕಾರ್ಯದರ್ಶಿ ಶ್ರೀ ಈಶ್ವರ ಭಟ್ ಉಪಸ್ಥಿತರಿದ್ದರು. ಈ ವರ್ಷಾಚರಣೆಯ ಪ್ರಯುಕ್ತ ಸೇವಾಶ್ರಮಕ್ಕೆ ಧನಸಹಾಯ ಹಾಗೂ ಆಶ್ರಮ ವಾಸಿಗಳಿಗೆ ಹಣ್ಣು–ಹಂಪಲನ್ನು ವಿತರಿಸಲಾಯಿತು. ಪುತ್ತೂರಿನ ಗಾನ ಸಿರಿ ಕಲಾ ಕೇಂದ್ರದ ಶ್ರೀ ಕಿರಣ್ ಕುಮಾರ್ ನೇತೃತ್ವದ ತಂಡದಿಂದ "ಭಜನ್ ಕಾರ್ಯಕ್ರಮ" ನಡೆಯಿತು.

## ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಯ ಅಧ್ಯಕ್ಷರು/ ನಿರ್ದೇಶಕರ ತರಬೇತಿ ಕಾರ್ಯಾಗಾರ



ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಉಡುಪಿ ಮತ್ತು ಶ್ರೀ ವೇಣುಗೋಪಾಲಕೃಷ್ಣ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಉಡುಪಿ ಇವರ ಜಂಟಿ ಆಶ್ರಯದಲ್ಲಿ ದಿನಾಂಕ 14.05.2016ರಂದು ಜಿಲ್ಲಾ ಸೌಹಾರ್ದ ಸಹಕಾರಿಯ ಅಧ್ಯಕ್ಷರು/ ನಿರ್ದೇಶಕರ ತರಬೇತಿ ಕಾರ್ಯಾಗಾರವನ್ನು ಉಡುಪಿಯ ಹೋಟೆಲ್ ನೈವೇದ್ಯದ ಅನುಗ್ರಹ ಸಭಾಂಗಣದಲ್ಲಿ ನಡೆಯಿತು. ಕಾರ್ಯಾಗಾರವನ್ನು ಶ್ರೀ ಕಿಶೋರ್ ಕುಮಾರ್ ಕೊಡ್ಗಿ, ನಿರ್ದೇಶಕರು, ಕ್ಯಾಂಪ್ಕೋ ನಿಯಮಿತ, ಮಂಗಳೂರು ಇವರು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಜಿಲ್ಲಾ ಸೌಹಾರ್ದ ಒಕ್ಕೂಟದ ಅಧ್ಯಕ್ಷರಾದ ಶ್ರೀ ಮಂಜುನಾಥ ಎಸ್.ಕೆ.ರವರು ವಹಿಸಿದ್ದರು.

## ಛತ್ರಪತಿ ಶಿವಾಜಿ ಮಹಾರಾಜರ 389ನೇ ಜಯಂತೋತ್ಸವ ಕಾರ್ಯಕ್ರಮ



ಶ್ರೀ ಶಿವಾಜಿ ಮಹಾರಾಜ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿ., ವಿಜಯಪುರ ಸಹಕಾರಿಯಿಂದ ಛತ್ರಪತಿ ಶಿವಾಜಿ ಮಹಾರಾಜರ 389ನೇ ಜಯಂತೋತ್ಸವ ಕಾರ್ಯಕ್ರಮವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಅರುಣ ಕದಂರವರಿಂದ ಧ್ವಜಾರೋಹಣ ಮಾಡುವ ಹಾಗೂ ಛತ್ರಪತಿ ಶಿವಾಜಿ ಮಹಾರಾಜರ ಕಂಚಿನ ಪುತ್ಥಳಿಗೆ ಮಾಲಾರ್ಪಣೆ ಮಾಡುವ ಮೂಲಕ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರು, ಸದಸ್ಯರು ಉಪಸ್ಥಿತರಿದ್ದರು.

## ಶ್ರೀರಾಮಾಂಜನೇಯ ವಿವಿಧೋದ್ದೇಶ ಸೌಹಾರ್ದ ಸಹಕಾರಿಯಿಂದ 2016-17ನೇ ಸಾಲಿನ ಸಮಾಜಮುಖಿ ಕಾರ್ಯ ಯೋಜನೆ - ಉಚಿತ ಆರೋಗ್ಯ ತಪಾಸಣಾ ಶಿಬಿರ

ಶ್ರೀ ರಾಮಾಂಜನೇಯ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಕೋಡಿ ಕನ್ಯಾಣ ಸಹಕಾರಿಯು ಪ್ರತಿ ವರ್ಷವು ಸಾಮಾಜಿಕ ಸೇವಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದರ ಮೂಲಕ ಗ್ರಾಮಾಂತರ ಜನರಿಗೆ ಆಶಾಕಿರಣವಾಗಬೇಕು ಎನ್ನುವ ಉದ್ದೇಶದಿಂದ ಈ ವರ್ಷ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಸ್ಥಳೀಯ ಸಂಸ್ಥೆಯಾದ ಸುಮಧುರ ಯುವಕ ಮಂಡಲ (ರಿ), ಕೋಡಿ–ಕನ್ಯಾಣ ಸಹಯೋಗದೊಂದಿಗೆ ದಿನಾಂಕ 24.04.2016ರಂದು ಹಮ್ಮಿಕೊಳ್ಳಲಾಯಿತು.

ಶಿಬಿರವನ್ನು ಉಡುಪಿ ಜಿಲ್ಲಾ ಸೌಹಾರ್ದ ಒಕ್ಕೂಟದ ಅಧ್ಯಕ್ಷರಾದ ಶ್ರೀ ಮಂಜುನಾಥ ಎಸ್.ಕೆ. ರವರು ಉದ್ಘಾಟಿಸಿದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಶಂಕರವರು ಅಧ್ಯಕ್ಷತೆಯನ್ನು ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಮಣಿಪಾಲ K.M.Cಯ ನುರಿತ ವೈದ್ಯರು ಡಾ.ಮೊನಾಲಿ ಹಜಾರಿಕ (Opthomology ವಿಭಾಗ), ಡಾ.ಶ್ರವಣ್ (Cardiology ವಿಭಾಗ), ಮಣಿಪಾಲ ಆಸ್ಪತ್ರೆ, ಸುಮಧುರ ಯುವಕ ಮಂಡಲದ ಕಾರ್ಯದರ್ಶಿ ಶ್ರೀ ಸುರೇಶ್ ಕಾಂಚನ್, ಸ.ಹಿ.ಪ್ರಾ. ಶಾಲೆಯ ಮುಖ್ಯೋಪಾಧ್ಯಾಯರು ಶ್ರೀಮತಿ ಸಂಪಾ ಸಭೆಯಲ್ಲಿ ಉಪಸ್ಥಿತರಿದ್ದರು.

ಈ ಶಿಬಿರದಲ್ಲಿ 250ಕ್ಕೂ ಅಧಿಕ ಶಿಬಿರಾರ್ಥಿಗಳಿಗೆ ಉಚಿತವಾಗಿ ECG ಪರೀಕ್ಷೆ ನಡೆಸಲಾಯಿತು. KMC phosiotheraphy ಚಿಕಿತ್ಸಾ ವಿಭಾಗದ ನುರಿತ ವೈದ್ಯರಿಂದ ಮಧುಮೇಹ (ಸಕ್ಕರೆ ಖಾಯಿಲೆ) ಸಂಬಂಧಿ ಸಮಗ್ರ ಪರೀಕ್ಷೆಯನ್ನು, ಕಿವಿ, ಮೂಗು, ಗಂಟಲು ವಿಭಾಗದ ವೈದ್ಯಾಧಿಕಾರಿಗಳಿಂದ ENT ಪರೀಕ್ಷೆಯನ್ನು ಹಾಗೂ Opthomolgy ವಿಭಾಗದ ನುರಿತ ವೈದ್ಯರಿಂದ ಕಣ್ಣಿನ ತಪಾಸಣೆಯನ್ನು ನಡೆಸಲಾಯಿತು.



ಈ ಶಿಬಿರದಿಂದ 250 ಮಂದಿ ಉಚಿತ ತಪಾಸಣೆ ಮಾಡಿಸಿಕೊಂಡಿದ್ದು, 15 ಮಂದಿ ಉಚಿತ ಶಸ್ತ್ರ ಚಿಕಿತ್ಸೆಯ ಪ್ರಯೋಜನ ಪಡೆದುಕೊಂಡರು.

## ಶ್ರೀ ರಾಮಾಂಜನೇಯ ವಿವಿಧೋದ್ದೇಶ ಸೌಹಾರ್ದ ಸಹಕಾರಿಯಿಂದ "ಶ್ರೀ ರಾಮ ಸಹಾಯ ಗುಂಪು ಸಾಲ ವಿತರಣೆ"

ಶ್ರೀ ರಾಮಾಂಜನೇಯ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಕೋಡಿ ಕನ್ಯಾಣ ಸಹಕಾರಿಯಿಂದ ದಿನಾಂಕ 15.05.2016ರಂದು ಆಯೋಜಿಸಲಾಗಿದ್ದ "ಶ್ರೀ ರಾಮ ಸಹಾಯ ಗುಂಪು ಸಾಲ ವಿತರಣಾ" ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದ ಉಡುಪಿ ಜಿಲ್ಲಾ ಸೌಹಾರ್ದ ಒಕ್ಕೂಟದ ಅಧ್ಯಕ್ಷರಾದ ಶ್ರೀ ಮಂಜುನಾಥ ಎಸ್.ಕೆ.ರವರು ಗುಂಪು ಸಾಲ ಸೌಹಾರ್ದದ ಸಂಕೇತವಾಗಿದೆ. ಪರಸ್ಪರ ಒಬ್ಬರಿಂದ ಒಬ್ಬರಿಗೆ ಸಹಾಯ ಮಾಡುವ ದೃಷ್ಟಿಯಿಂದ ಹುಟ್ಟಿಕೊಂಡ ಯೋಜನೆಯೇ ಗುಂಪು ಸಾಲ ಯೋಜನೆ ಎಂದು ತಿಳಿಸಿದರು.



ಶ್ರೀ ರಾಮಾಂಜನೇಯ ಸೌಹಾರ್ದವು ಕೇವಲ 2 ವರ್ಷದಲ್ಲಿ 20 ಮಹಿಳಾ ಗುಂಪನ್ನು ರಚಿಸಿ, (ಒಂದು ಗುಂಪಿನಲ್ಲಿ 10 ಜನ) ಒಬ್ಬರಿಗೆ ರೂ.50,000/–ರಂತೆ ಒಂದು ಗುಂಪಿಗೆ 5 ಲಕ್ಷ ರೂಪಾಯಿ, ಒಟ್ಟು ಒಂದು ಕೋಟಿಗಿಂತಲೂ ಅಧಿಕ ಗುಂಪು ಸಾಲವನ್ನು ವಿತರಿಸಿದ್ದು, ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಒಂದು ವಿಶಿಷ್ಟ ಮೈಲುಗಲ್ಲನ್ನು ಸ್ಥಾಪಿಸಿರುವುದು ಉಲ್ಲೇಖನೀಯ ಎಂದರು.

## ಸಿದ್ಧಸಿರಿ ಪತ್ತಿನ ಸೌಹಾರ್ದ ಸಹಕಾರಿಯ ದಶಮಾನೋತ್ಸವ

# ಸಹಕಾರಿ ಕ್ಷೇತ್ರದಿಂದ ಮೀಟರ್ ಬಡ್ಡಿ ವ್ಯವಹಾರ ನಿಯಂತ್ರಣ ಸಾಧ್ಯ – ಶ್ರೀ ಗುರುನಾಥ ಜಾಂತಿಕರ



**ವಿಜಯಪುರದ ಪ್ರತಿಷ್ಠಿತ ಸಿದ್ಧಸಿರಿ ಪತ್ತಿನ ಸೌಹಾರ್ದ ಸಹಕಾರಿಯ ದಶಮಾನೋತ್ಸವ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ನೆರವೇರಿಸಿ, ಸಹಕಾರಿ ಸಂಸ್ಥೆಗಳು ಉತ್ತಮವಾಗಿ ಕಾಯನಿರ್ವಹಿಸುವುದರಿಂದ ಬಡವರಿಗೆ ಹಣಕಾಸಿನ ನೆರವು ಸಾಧ್ಯವಾಗಿದೆ. ಇದರಿಂದಾಗಿ ಮೀಟರ್ ಬಡ್ಡಿ ವ್ಯವಸ್ಥೆಯಿಂದ ಬಡವರು ಹೊರಬರುವಂತಾಗುತ್ತಿದೆ.**

ಸಹಕಾರ ಕ್ಷೇತ್ರ ಆರ್ಥಿಕ ಅಭಿವೃದ್ಧಿಯ ಉತ್ತಮ ಸಾಧನ ಎಂದು ತಿಳಿಸಿದರು. ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ಕಳೆದ 15 ವರ್ಷಗಳಲ್ಲಿ ಉತ್ತಮ ಪ್ರಗತಿಯನ್ನು ಸಾಧಿಸಿದೆ.

ಪ್ರಸ್ತುತ ರಾಜ್ಯದಲ್ಲಿ 3600ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು, ಶೇರು ಬಂಡವಾಳ ರೂ.550 ಕೋಟಿ, ಠೇವಣಿಗಳು ರೂ.11,000 ಕೋಟಿ, ದುಡಿಯುವ ಬಂಡವಾಳ ರೂ. 12,500 ಕೋಟಿ, ಸಾಲ ನೀಡಿಕೆ ರೂ. 7,500 ಕೋಟಿ, ಲಾಭ ರೂ.175 ಕೋಟಿ, 50,000ಕ್ಕೂ ಹೆಚ್ಚು ಜನರಿಗೆ ಉದ್ಯೋಗವನ್ನು ನೀಡಿದೆ ಎಂದರು.

ಅದರಲ್ಲಿ ವಿಜಯಪುರದ ಸಿದ್ಧಸಿರಿ ಪತ್ತಿನ ಸೌಹಾರ್ದ ಸಹಕಾರಿಯು ಶ್ರೀ ಬಸನಗೌಡ ಪಾಟೀಲ ಯತ್ನಾಳ ಇವರ ನೇತೃತ್ವದಲ್ಲಿ ಉತ್ತಮ ಸಾಧನೆ ಮಾಡುತ್ತಿರುವುದು ಶ್ಲಾಘನೀಯ ಹಾಗೂ ಅಭಿನಂದನೀಯ ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಬಸನಗೌಡ ಪಾಟೀಲ ಯತ್ನಾಳರವರು ವಹಿಸಿದ್ದರು.

## ಸಹಕಾರ ರಂಗ ದೇಶದ ಪ್ರಗತಿಯಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಿದೆ – ಶ್ರೀ ಸಿದ್ಧಲಿಂಗ ಸ್ವಾಮೀಜಿ

ಕಾರ್ಯಕ್ರಮದ ಸಾನಿಧ್ಯವನ್ನು ವಹಿಸಿ, ಮಾತನಾಡಿದ ಗದಗ ತೋಂಟದಾರ್ಯ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿಯವರು ಸಹಕಾರ ಕ್ಷೇತ್ರ ಈ ದೇಶದ ಆರ್ಥಿಕ ಪ್ರಗತಿಯಲ್ಲಿ ಮಹತ್ವದ ಪಾತ್ರ ವಹಿಸುತ್ತಾ ಬಂದಿದೆ. ಸಹಕಾರ ಕ್ಷೇತ್ರ ಜೀವನದ ಎಲ್ಲಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಜನಸಾಮಾನ್ಯರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸುತ್ತಿರುವುದು ಶ್ಲಾಘನೀಯ. ಧರ್ಮ ಮಾರ್ಗದಿಂದ ಹಣ ಗಳಿಸಿ, ಉತ್ತಮ ಕಾರ್ಯಗಳಿಗೆ ವಿನಿಯೋಗಿಸಬೇಕು ಎಂದು ತಿಳಿಸಿದರು. ಪ್ರಾರಂಭದಲ್ಲಿ ಶ್ರೀ ಎಸ್.ಬಿ.ಸಜ್ಜನರವರು ಅತಿಥಿ ಗಣ್ಯರನ್ನು ಸ್ವಾಗತಿಸಿದ ನಂತರ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶಂಕರಗೌಡ ಪಾಟೀಲರವರು ಪ್ರಾಸ್ತಾವಿಕ ಭಾಷಣ ಮಾಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಬಸವರಾಜ ಮನ್ನೂರೆರವರು ಹಾಗೂ ವಂದನಾರ್ಪಣೆಯನ್ನು ಶ್ರೀ ರಾಘವ ಅಣ್ಣಿಗೇರಿರವರು ನೆರವೇರಿಸಿದರು.

## ಬ್ಲಡ್ ಬ್ಯಾಂಕ್ ಸ್ಥಾಪನೆ – ಶ್ರೀ ಬಸನಗೌಡ ಪಾಟೀಲ ಯತ್ನಾಳ



ಶೀಘ್ರದಲ್ಲಿಯೇ ಸಿದ್ಧಸಿರಿ ಪತ್ತಿನ ಸೌಹಾರ್ದ ಸಹಕಾರಿ ವತಿಯಿಂದ ಸುಸಜ್ಜಿತ ಬ್ಲಡ್ ಬ್ಯಾಂಕ್ ಸ್ಥಾಪಿಸಲಾಗುವುದೆಂದು ಸಿದ್ಧಸಿರಿ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಶ್ರೀ ಬಸನಗೌಡ ಪಾಟೀಲ ಯತ್ನಾಳ ತಿಳಿಸಿದರು. ಸಿದ್ಧಸಿರಿ ಪತ್ತಿನ ಸೌಹಾರ್ದ ಸಹಕಾರಿಯ ಪರವಾಗಿ ಶ್ರೀಯುತರನ್ನು ಗೌರವಿಸಲಾಯಿತು.

ಸಮಾರಂಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಸಿದ್ಧಸಿರಿ ಪತ್ತಿನ ಸೌಹಾರ್ದ ಸಹಕಾರಿಯ ಶತಮಾನೋತ್ಸವ ಸಮಿತಿಯ ಅಧ್ಯಕ್ಷರಾದ ಶ್ರೀ ಸಿದ್ಧರಾಮಪ್ಪ ಉಪ್ಪಿನ ಹಾಗೂ ಸಾವಿರಾರು ಸದಸ್ಯರು ಮತ್ತು ಸಾರ್ವಜನಿಕರು ಭಾಗವಹಿಸಿದ್ದರು.

# ಸಂಯುಕ್ತ ಸಹಕಾರಿಯ ಮುಂಬರುವ ತರಬೇತಿ ಕಾರ್ಯಕ್ರಮಗಳು

- **ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮ : ದಿನಾಂಕ 10 ಜೂನ್ 2016 ರಿಂದ 19 ಜೂನ್ 2016ರವರೆಗೆ, ಸ್ಥಳ : ಬೆಂಗಳೂರು.**

  ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 15ನೇ ತಂಡದ ವ್ಯಕ್ತಿತ್ವ ವಿಕಸನ ತರಬೇತಿಯನ್ನು ಬೆಂಗಳೂರಿನ ಪದ್ಮನಾಭನಗರದಲ್ಲಿರುವ "ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ"ಯಲ್ಲಿ ದಿನಾಂಕ : 10 ಜೂನ್ 2016 ರಿಂದ 19 ಜೂನ್ 2016ರವರೆಗೆ ಆಯೋಜಿಸಲಾಗಿದೆ.

- **ಸೌಹಾರ್ದ ಪಟ್ಟಣ ಸಹಕಾರ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ 7 ದಿನಗಳ "ಬ್ಯಾಂಕಿಂಗ್ ಕಾರ್ಯಕ್ಷಮತೆ ಅಭಿವೃದ್ಧಿ ತರಬೇತಿ" – ದಿನಾಂಕ 10 ಜುಲೈ 2016 ರಿಂದ 16 ಜುಲೈ 2016ರವರೆಗೆ, ಸ್ಥಳ : ಬೆಂಗಳೂರು.**

  ಸೌಹಾರ್ದ ಸಹಕಾರಿ ಕ್ಷೇತ್ರದ ಪಟ್ಟಣ ಸಹಕಾರಿ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ 7 ದಿನಗಳ ಬ್ಯಾಂಕಿಂಗ್ ಕಾರ್ಯ ಕ್ಷಮತೆ ಅಭಿವೃದ್ಧಿ ತರಬೇತಿಯನ್ನು 10 ಜುಲೈ 2016 ರಿಂದ 16 ಜುಲೈ 2016ರವರೆಗೆ ಬೆಂಗಳೂರಿನ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯಲ್ಲಿ ಏರ್ಪಡಿಸಲಾಗುವುದು. ಈ ತರಬೇತಿ ಅವಧಿಯಲ್ಲಿ ಪ್ರಸಕ್ತ ಬ್ಯಾಂಕಿಂಗ್ ಕ್ಷೇತ್ರದ ವಿದ್ಯಮಾನಗಳು, ಬ್ಯಾಂಕಿಂಗ್ ಕಾರ್ಯಚಟುವಟಿಕೆಗಳು, ನೆಗೋಶಿಯೇಬಲ್ ಕಾಯ್ದೆ, ಬ್ಯಾಂಕಿಂಗ್ ರೆಗ್ಯುಲೇಶನ್ ಕಾಯ್ದೆ, ಇತರೆ ಸಂಬಂಧಿಸಿದ ಕಾಯ್ದೆಗಳು, ಕ್ರೆಡಿಟ್ ಅಪ್ರೇಸಲ್, ಡಾಕ್ಯುಮೆಂಟೇಶನ್, ಸಿಬಿಎಸ್, ಕ್ರೆಡಿಟ್ ಮ್ಯಾನೇಜ್‌ಮೆಂಟ್, ರಿಕವರಿ ಮ್ಯಾನೇಜ್‌ಮೆಂಟ್, ಸೌಹಾರ್ದ ಸಹಕಾರಿ ಕಾಯ್ದೆ, ರಿಸರ್ವ್ ಬ್ಯಾಂಕಿನ ನಿರ್ದೇಶನಗಳು, ಪ್ರಾಯೋಗಿಕಗಳು, ಗ್ರಾಹಕ ಸೇವೆಗಳ ನಿರ್ವಹಣೆ, ನಿಮ್ಮ ಗ್ರಾಹಕರನ್ನು ನೀವು ತಿಳಿದಿರಿ, ಲೆಕ್ಕಪತ್ರ ಪದ್ಧತಿ ಇತ್ಯಾದಿ ವಿಷಯಗಳ ಬಗ್ಗೆ ಬ್ಯಾಂಕಿಂಗ್ ಕ್ಷೇತ್ರದ ಅನುಭವಿ ತಜ್ಞರಿಂದ ಉಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. ಜೊತೆಗೆ ಪ್ರತಿದಿನ ಯೋಗ ಹಾಗೂ ಅನೌಪಚಾರಿಕ ಸಭೆಗಳ ವ್ಯವಸ್ಥೆ ಇರುತ್ತದೆ. ತರಬೇತಿ ವೆಚ್ಚಗಳನ್ನು ಸಂಯುಕ್ತ ಸಹಕಾರಿಯು ನಿರ್ವಹಿಸುತ್ತದೆ. ಪ್ರತಿನಿಧಿಗಳ ಊಟ, ಉಪಹಾರ ಹಾಗೂ ವಸತಿ ವೆಚ್ಚಗಳ ನಿರ್ವಹಣೆಗಾಗಿ ದಿನಕ್ಕೆ ರೂ.500/–ರಂತೆ 7 ದಿನಗಳಿಗಾಗಿ ರೂ.3500/–ಗಳನ್ನು ಪ್ರತಿ ಅಭ್ಯರ್ಥಿಯು ಪಾವತಿಸಬೇಕಾಗುತ್ತದೆ. ಪ್ರವೇಶ 40 ಜನರಿಗೆ ಮಾತ್ರ. ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿ ಬ್ಯಾಂಕುಗಳು ಈ ತರಬೇತಿ ಕಾರ್ಯಕ್ರಮದ ಪ್ರಯೋಜನ ಪಡೆಯಲು ಕೋರಿದೆ. ಹೆಚ್ಚಿನ ವಿವರಗಳಿಗಾಗಿ ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸಿ ಮಾಹಿತಿ ಪಡೆಯುವುದು.

- **ಕಲಬುರಗಿ ವಿಭಾಗ – "ಆಡಳಿತ ಪರಿಣಿತ ಅಭಿವೃದ್ಧಿ ಕಾರ್ಯಾಗಾರ" :**

  ದಿನಾಂಕ 12 ಜೂನ್ 2016, ಭಾನುವಾರದಂದು ಸಿಂಧನೂರು ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಆಡಳಿತ ಮಂಡಲಿ ಸದಸ್ಯರಿಗೆ "ಆಡಳಿತ ಪರಿಣಿತ ಅಭಿವೃದ್ಧಿ ಕಾರ್ಯಾಗಾರ"ವನ್ನು ಬೆಳಿಗ್ಗೆ 10.30 ಗಂಟೆಗೆ ವಿನಯ್ ರೆಸಿಡೆನ್ಸಿ, ಗಂಗಾವತಿ ರಸ್ತೆ, ಸಿಂಧನೂರು ಇಲ್ಲಿ ಆಯೋಜಿಸಲಾಗಿದೆ. ಕಾರ್ಯಾಗಾರದಲ್ಲಿ ಒಂದು ಸಹಕಾರಿಯಿಂದ ಸಹಕಾರಿಯ ಅಧ್ಯಕ್ಷರು ಹಾಗೂ ಆಡಳಿತ ಮಂಡಲಿಯ ಒಬ್ಬ ಸದಸ್ಯರು ಭಾಗವಹಿಸುವುದು.

## ಅಧ್ಯಕ್ಷರು – ಉಪಾಧ್ಯಕ್ಷರ ಆಯ್ಕೆ

### ಶುಶೃತಿ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಬೆಂಗಳೂರು



ಶ್ರೀ ಎನ್.ಶ್ರೀನಿವಾಸಮೂರ್ತಿ
ಅಧ್ಯಕ್ಷರು



ಶ್ರೀ ರತ್ನಂ ಕೆ.
ಉಪಾಧ್ಯಕ್ಷರು

### ಸನ್ನಿಧಿ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿರವಾರ



ಶ್ರೀ ಪ್ರಕಾಶ್ ಜೇಗರಕಲ್
ಅಧ್ಯಕ್ಷರು



ಶ್ರೀ ಹಾಜಿಮಲಂಗ
ಉಪಾಧ್ಯಕ್ಷರು

## ರಾಷ್ಟ್ರೀಯ ಸಹಕಾರಿ ಶಿಕ್ಷಣ ಕೇಂದ್ರ (ಎನ್‌ಸಿಸಿಇ), ನವದೆಹಲಿ ವತಿಯಿಂದ ಆಯೋಜಿಸಲಾಗಿದ್ದ ತರಬೇತಿದಾರರ ತರಬೇತಿ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಅಧಿಕಾರಿಗಳಿಗೆ ತರಬೇತಿ



ಸಂಯುಕ್ತ ಸಹಕಾರಿಯ ಅಧಿಕಾರಿಗಳು ರಾಷ್ಟ್ರೀಯ ಸಹಕಾರಿ ಯೂನಿಯನ್, ನವದೆಹಲಿಯ ಮುಖ್ಯಕಾರ್ಯ ನಿರ್ವಹಣಾಧಿಕಾರಿಯಾದ ಶ್ರೀ ಎನ್.ಸತ್ಯನಾರಾಯಣ್ ಹಾಗೂ ನಿರ್ದೇಶಕರಾದ ಡಾ. ಶ್ರೀನಾಥ್‌ರವರೊಂದಿಗೆ ವಿಚಾರ ವಿನಿಮಯ.

## ನಿಮ್ಮ ಪ್ರಶ್ನೆ




## ನಮ್ಮ ಉತ್ತರ

– ಶ್ರೀಕಾಂತ ಬರುವೆ
ಸಹ ಪ್ರಧಾನ ವ್ಯವಸ್ಥಾಪಕರು,
ಕ.ರಾ.ಸೌ.ಸಂ.ಸ.ನಿ.,

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ – ಸಂಪಾದಕರು

**ಪ್ರಶ್ನೆ 1 : ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಸದಸ್ಯತ್ವವನ್ನು ಪಡೆದುಕೊಂಡಿರುವ ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕುಗಳು ಶೇ.1 ಶಿಕ್ಷಣ ನಿಧಿಯನ್ನು ಪಾವತಿಸಬೇಕೇ?**

**ಉತ್ತರ** : ದಿನಾಂಕ 06 ಅಕ್ಟೋಬರ್ 2014ರಿಂದ ಜಾರಿಗೆ ಬರುವಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ಕ್ಕೆ ಮಾಡಲಾದ ತಿದ್ದುಪಡಿಯಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳು ಶೇ.1ರಷ್ಟು ಶಿಕ್ಷಣ ನಿಧಿಯನ್ನು ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಲಕ್ಕೆ ಪಾವತಿಸುವುದನ್ನು ಸೇರಿಸಲಾಗಿರುತ್ತದೆ. ಆದರೆ, ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರಡಿ ನೋಂದಣಿ ಹೊಂದಿರುವ ಬ್ಯಾಂಕ್ ಆಗಿರುತ್ತದೆ. ಅಲ್ಲದೇ, ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಲಕ್ಕೆ ಶೇ.1 ಶಿಕ್ಷಣ ನಿಧಿ ಪಾವತಿಸುವ ಪ್ರಾವಧಾನವನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರಡಿ ಸೇರಿಸಲಾಗಿರುತ್ತದೆ. ಆದರೆ, ಸೌಹಾರ್ದ ಸಹಕಾರಿ ಬ್ಯಾಂಕ್‌ಗಳು ಗಳಿಸುವ ಲಾಭದ ವಿಲೇವಾರಿಯನ್ನು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 10 (2) (xxi)ರಲ್ಲಿ ತಿಳಿಸಿರುವಂತೆ ಮಾಡಬೇಕಿರುತ್ತದೆ. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 10 (2) (xxi)ರನ್ವಯ ಶಿಕ್ಷಣ ನಿಧಿಯನ್ನು ಶೇ.2ರಷ್ಟು ಸಂಯುಕ್ತ ಸಹಕಾರಿಗೆ ಮಾತ್ರ ಪಾವತಿಸಿಬೇಕಿದ್ದು, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಲಕ್ಕೆ ಶೇ.1ರಷ್ಟು ಶಿಕ್ಷಣ ನಿಧಿ ಪಾವತಿಸುವ ಬಾಧ್ಯತೆಯನ್ನು ಹೊಂದಿರುವುದಿಲ್ಲ.

**ಪ್ರಶ್ನೆ 2 : ಸಾಮಾನ್ಯ ಸದಸ್ಯರು, ಸಹ ಸದಸ್ಯರು ಮತ್ತು ನಾಮಮಾತ್ರ ಸದಸ್ಯರಿಗಿರುವ ವ್ಯತ್ಯಾಸ**

**ಉತ್ತರ** : ಸಾಮಾನ್ಯ ಸದಸ್ಯರು, ಸಹ ಸದಸ್ಯರು ಮತ್ತು ನಾಮಮಾತ್ರ ಸದಸ್ಯರಿಗಿರುವ ವ್ಯತ್ಯಾಸ ಈ ಕೆಳಕಂಡಂತಿದೆ;

| ಕ್ರ.ಸಂ. | ಸಾಮಾನ್ಯ ಸದಸ್ಯರು | ಸಹ ಸದಸ್ಯರು | ನಾಮಮಾತ್ರ ಸದಸ್ಯರು |
|---|---|---|---|
| 1. | ಶೇರು ಮತ್ತು ಶೇರು ಶುಲ್ಕವಿರುತ್ತದೆ | ಶೇರು ಮತ್ತು ಶೇರು ಶುಲ್ಕವಿರುತ್ತದೆ. | ಶೇರು ಮತ್ತು ಶೇರು ಶುಲ್ಕವಿರುವುದಿಲ್ಲ. ಸದಸ್ಯತ್ವ ಶುಲ್ಕ ಅಥವಾ ಪ್ರವೇಶ ಶುಲ್ಕವಿರುತ್ತದೆ. |
| 2. | ಡಿವಿಡೆಂಡ್ ಪಡೆಯಲು ಅರ್ಹರು | ಡಿವಿಡೆಂಡ್ ಪಡೆಯಲು ಅರ್ಹರು. | ಡಿವಿಡೆಂಡ್ ಪಡೆಯಲು ಅರ್ಹರಾಗಿರುವುದಿಲ್ಲ. |
| 3. | ಸಹಕಾರಿಯ ಸಾಮಾನ್ಯ ಸಭೆಯಲ್ಲಿ ಭಾಗವಹಿಸಲು ಅರ್ಹತೆ ಹೊಂದಿರುತ್ತಾರೆ. | ಸಹಕಾರಿಯ ಸಾಮಾನ್ಯ ಸಭೆಯಲ್ಲಿ ಭಾಗವಹಿಸಲು ಮತ್ತು ಮತ ನೀಡಲು ಅರ್ಹತೆ ಹೊಂದಿರುವುದಿಲ್ಲ. | ಸಹಕಾರಿಯ ಸಾಮಾನ್ಯ ಸಭೆಯಲ್ಲಿ ಭಾಗವಹಿಸಲು ಮತ್ತು ಮತ ನೀಡಲು ಅರ್ಹತೆ ಹೊಂದಿರುವುದಿಲ್ಲ. |
| 4. | ಸಹಕಾರಿಯ ವ್ಯವಸ್ಥಾಪನೆಯಲ್ಲಿ ಭಾಗವಹಿಸ ಬಹುದಾಗಿರುತ್ತದೆ. | ಸಹಕಾರಿಯ ವ್ಯವಸ್ಥಾಪನೆಯಲ್ಲಿ ಭಾಗವಹಿಸುವಂತಿಲ್ಲ. | ಸಹಕಾರಿಯ ವ್ಯವಸ್ಥಾಪನೆಯಲ್ಲಿ ಭಾಗವಹಿಸುವಂತಿಲ್ಲ. |
| 5. | ಸದಸ್ಯತ್ವವನ್ನು ಹೊಂದಲು ನಿರ್ದಿಷ್ಟ ಉದ್ದೇಶ ಹೊಂದಿರಬೇಕಾದ ಅವಶ್ಯಕತೆಯಿರುವುದಿಲ್ಲ. | ಉಪವಿಧಿಯಲ್ಲಿ ನಮೂದಿಸಿದ ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ ಮಾತ್ರ ಸಹ ಸದಸ್ಯನನ್ನು ಸೇರಿಸಕೊಳ್ಳಬಹುದಾಗಿರುತ್ತದೆ. | ಉಪವಿಧಿಯಲ್ಲಿ ನಮೂದಿಸಿದ ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ ನಾಮಮಾತ್ರ ಸದಸ್ಯನನ್ನು ಸೇರಿಸಕೊಳ್ಳಬಹುದಾಗಿರುತ್ತದೆ. |
| 6. | ಸಹಕಾರಿಯ ಚುನಾವಣೆಯಲ್ಲಿ ಮತ ಚಲಾಯಿಸ ಬಹುದು ಮತ್ತು ಒಬ್ಬ ನಿರ್ದೇಶಕ ಅಥವಾ ಪದಾಧಿಕಾರಿಯಾಗಿ ಚುನಾಯಿತನಾಗಬಹುದು. | ಸಹಕಾರಿಯ ಚುನಾವಣೆಯಲ್ಲಿ ಮತ ಚಲಾಯಿಸುವಂತಿಲ್ಲ ಮತ್ತು ಒಬ್ಬ ನಿರ್ದೇಶಕ ಅಥವಾ ಪದಾಧಿಕಾರಿಯಾಗಿ ಚುನಾಯಿತನಾಗುವಂತಿಲ್ಲ. | ಸಹಕಾರಿಯ ಚುನಾವಣೆಯಲ್ಲಿ ಮತ ಚಲಾಯಿಸು ವಂತಿಲ್ಲ ಮತ್ತು ಒಬ್ಬ ನಿರ್ದೇಶಕ ಅಥವಾ ಪದಾಧಿಕಾರಿಯಾಗಿ ಚುನಾಯಿತನಾಗುವಂತಿಲ್ಲ. |
| 7. | ಸದಸ್ಯತ್ವದ ಅವಧಿ ಅನಿರ್ದಿಷ್ಟಾವಧಿಯಾಗಿರುತ್ತದೆ. (ಕಲಂ 20 (2)ರಲ್ಲಿ ಸದಸ್ಯತ್ವದಲ್ಲಿ ಮುಂದು ವರೆಯಲು ಅರ್ಹತೆಗಳನ್ನು ತಿಳಿಸಿದ್ದು, ಅದರಂತೆ ನಡೆದುಕೊಂಡಲ್ಲಿ) | ಉಪವಿಧಿಯಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶದ ನಂತರ ಸದಸ್ಯತ್ವ ಕೊನೆಗೊಳ್ಳುತ್ತದೆ. | ಸದಸ್ಯತ್ವದ ಅವಧಿ ಮೂರು ವರ್ಷಗಳು ಅಥವಾ ನಿರ್ದಿಷ್ಟಪಡಿಸಿದ ಉದ್ದೇಶದ ಈಡೇರಿಕೆ ಇದರಲ್ಲಿ ಯಾವುದು ಮೊದಲೋ ಅದು. |
| 8. | ಠೇವಣಿ ಸ್ವೀಕರಿಸಬಹುದು. | ಠೇವಣಿ ಸ್ವೀಕರಿಸಬಹುದು. | ಠೇವಣಿ ಸ್ವೀಕರಿಸುವಂತಿಲ್ಲ. |
| 9. | ಅನಿಯಮಿತ ಸಂಖ್ಯೆಯಲ್ಲಿ ಸದಸ್ಯರಿರಬಹುದು. | ಒಟ್ಟು ಸದಸ್ಯರ ಶೇ.10ನ್ನು ಮೀರುವಂತಿಲ್ಲ. (ಸಾಮಾನ್ಯ ಮತ್ತು ನಾಮಮಾತ್ರ ಸದಸ್ಯರು ಸೇರಿದಂತೆ) | ಅನಿಯಮಿತ ಸಂಖ್ಯೆಯಲ್ಲಿ ಸದಸ್ಯರಿರಬಹುದು. |



ಜೂ.5 ವಿಶ್ವ ಪರಿಸರ ದಿನ

# ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ



▶▶ ಶ್ರೀಮತಿ ಶೋಭಾ ಹೆಚ್.ಜಿ.,
ಸಂಪಾದಕಿ, ಸ್ತ್ರೀಜಾಗೃತಿ.

ಭಾರತೀಯ ಸಂಸ್ಕೃತಿಯಲ್ಲಿಯೇ ಅಡಗಿರುವ ಬಹುಮುಖ್ಯ ಅಂಗವಾದ ಪರಿಸರದ ಬಗ್ಗೆ ನಾವಿಂದು ಮಾತನಾಡುತ್ತಿದ್ದೇವೆ. ಅದನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿದ್ದೇವೆ. ಅದಕ್ಕಾದ ಹಾನಿಯಿಂದಾಗಿ ನಾವಿಂದು ಒದ್ದಾಡುತ್ತಿದ್ದೇವೆ. ಅದಕ್ಕೆಲ್ಲಾ ಕಾರಣ ನಾವೇ. ಪರಿಸರ ಅಂದಾಕ್ಷಣ ನಾವು ವಾಯು, ಜಲ, ಶಬ್ಧ ಮಾಲಿನ್ಯದ ಬಗ್ಗೆ ಯೋಚಿಸುತ್ತೇವೆ. ಅದರ ಜೊತೆಗೆ ಪರಿಸರ ಸಮುದಾಯ ಎಂಬ ಪದವನ್ನೂ ಬಳಸಲು ನಾವಿಲ್ಲಿ ಇಷ್ಟಪಡುತ್ತೇನೆ. ಮಾನವ ಪರಿಸರ (ಆಂತರಿಕ – ಬಾಹ್ಯ), ಕೃಷಿ ಪರಿಸರ, ಜಲಜೀವಿ ಪರಿಸರ, ಸಾಮಾಜಿಕ ಪರಿಸರ, ವಚನ ಪರಿಸರ, ಮಾನಸಿಕ ಪರಿಸರ, ಧಾರ್ಮಿಕ ಪರಿಸರ ಈ ಎಲ್ಲವನ್ನೂ ಒಳಗೊಂಡಂತೆ ಇರುವ ಪರಿಸರವನ್ನು ಸ್ವಾಭಾವಿಕ ವಿಭಾಗಗಳಾಗಿ ಪರಿಗಣಿಸದೇ ಪರಿಸರ ಸಂರಕ್ಷಣೆ ವಸ್ತುಗಳಾಗಿ ಪರಿಗಣಿಸುವ ಸಮಯ ಇದಾಗಿದೆ.

ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ, ಕಾಡು ಬೆಳೆಸಿ ನಾಡು ಉಳಿಸಿ, ಹಸಿರು ನಾಡನ್ನಾಗಿಸಿ ಎನ್ನುವ ಘೋಷಣೆಗಳಡಿಯಲ್ಲಿ ಬದುಕುತ್ತಿರುವ ನಾವು ಇಂದು ಅವರ ಅಭಿವೃದ್ಧಿ ತರುವುದರ ಬಗ್ಗೆ ಚಿಂತಿಸಬೇಕಾಗಿದೆ. ಅದು ನಮ್ಮೆಲ್ಲರ ಆದ್ಯ ಕರ್ತವ್ಯ ಕೂಡಾ.

ಭಾರತೀಯ ಪವಿತ್ರ ಗರ್ಭದಲ್ಲಿ ಜನಿಸಿರುವ ನಮಗೆ ನಮ್ಮ ಋಷಿ ಮುನಿಗಳ ನೂರಾರು ವರುಷದ ತಪಸ್ಸಿನ ಫಲವಾಗಿ ಒಂದು ಜೀವನ ಕ್ರಮ ಲಭ್ಯವಾಗಿದೆ. ಈ ಪವಿತ್ರ ನೆಲದಲ್ಲಿ ಸಾವಿರಾರು ಸಾಧು ಸಂತರು ಜನ್ಮವೆತ್ತಿ ಸಾಧನೆಗೈದು ರೂಪಿಸಿರುವ ಜೀವನ ಕ್ರಮವು ಸರಳವಾಗಿತ್ತು, ಸಾರ್ವಕಾಲಿಕ ಅನುಸರಣೀಯವೂ ಆಗಿತ್ತು. ಎಲ್ಲರೂ ಸುಖವಾಗಿರಲಿ, ಎಲ್ಲರೂ ನೆಮ್ಮದಿಯಿಂದಿರಲಿ, ಎಲ್ಲವೂ ಸಮೃದ್ಧವಾಗಿರಲಿ, ಯಾರೂ ದುಃಖಿತರಾಗುವುದು ಬೇಡ. ಸಸ್ಯ ಸಂಕುಲಕ್ಕೂ ಒಳ್ಳೆಯದಾಗಲಿ ಎಂದಿದ್ದ ಕಾಲವದು. ಇಂದು ನಾನು, ನನ್ನ ಕುಟುಂಬ, ನನ್ನ ಬಂಧು ಬಳಗ, ನನ್ನ ಜಾತಿ, ನನ್ನ ಮತ, ಎಲ್ಲಾ ನಾನು ಎನ್ನುವ ಮನುಷ್ಯ ಸಮುದಾಯದ ಪರಿಸರವನ್ನೇ ಹಾಳು ಮಾಡಿದ್ದಾನೆ. ಹಿರಿಯರು ಹಾಕಿಕೊಟ್ಟ ಪಥವನ್ನೇ ಮರೆತು ಸಾಗುತ್ತಿರುವ ನಮಗೆ ಮುಂದಿನ ದಿನಗಳಲ್ಲಿ ಉಸಿರಾಟಕ್ಕೂ ಅಲ್ಲಲ್ಲಿಯೇ ಆಮ್ಲಜನಕ ಬಂಕ್‌ಗಳನ್ನು (ಪೆಟ್ರೋಲ್ ಬಂಕ್‌ನಂತೆ) ಸ್ಥಾಪಿಸಬೇಕಾಗಬಹುದೇನೋ? ಈಗಲೇ ಎಚ್ಚೆತ್ತುಕೊಳ್ಳುವುದು ಒಳ್ಳೆಯದು.

"ಪರಿಸರ ಮಾಲಿನ್ಯದಲ್ಲಿ ಭಾರತ ಪ್ರಥಮ ಸ್ಥಾನದಲ್ಲಿದೆ ಮತ್ತು ಧೂಳಿನ ಅಂಶ ಅಧಿಕವಾಗಿದೆ ಎಂದು ತಿಳಿದಾಗ ಒಂದು ಕ್ಷಣ ತಲ್ಲಣ ಉಂಟುಮಾಡಿತು. ನಾಡಿನ ಗಡಿಯಲ್ಲಿ ಮಲೆನಾಡ ತಪ್ಪಲಿನಲ್ಲಿ ಅರಣ್ಯ ಪ್ರದೇಶಗಳಲ್ಲಿ ಮಾತ್ರ ಸಿಗುವ ಪ್ರಕೃತಿ ಸೊಬಗನ್ನು ಆಸ್ವಾದಿಸುವ ನಾವು ನಗರವಾಸಿಗಳು ನಾಗರೀಕರು ಇತ್ಯಾದಿಗಳೆಂದು ಕರೆಸಿಕೊಳ್ಳುತ್ತೇವೆ. ಆದರೆ ನಮ್ಮ ನಡುವಿನಲ್ಲಿ ಪ್ರತಿನಿತ್ಯದ ಕಾಯಕದಲ್ಲಿ ಮನೆ, ಬೀದಿ, ಚರಂಡಿ, ತ್ಯಾಜ್ಯ ಸಂಗ್ರಹ ಗುಂಡಿಗಳು ಇತ್ಯಾದಿಗಳ ಬಗ್ಗೆ ನಮಗಿರುವ ಕಾಳಜಿಯ ಬಗ್ಗೆ ಒಮ್ಮೆ ಆತ್ಮಾವಲೋಕನ ನಡೆಸಿದಾಗ ನಾವೆಷ್ಟು ಪರಿಸರಕ್ಕೆ ಒತ್ತು ನೀಡುತ್ತಿದ್ದೇವೆಂದು ಮನವರಿಕೆಯಾಗುತ್ತದೆ. ನಗರ ಯಾಂತ್ರಿಕ ಬದುಕಿನಲ್ಲಿ ನಮ್ಮ ಕುಟುಂಬ ಪರಿಸರದಲ್ಲಿನ ತ್ಯಾಜ್ಯಗಳನ್ನು ವಿಲೇವಾರಿಗೊಳಿಸುವ ಬಗ್ಗೆಯೇ ಗಮನಹರಿಸದೆ ಪರಿಸರಕ್ಕೆ ಮಾರಕವಾದ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ರಸ್ತೆಗಳಲ್ಲಿ ಎಸೆದು, ಜೀವ ಜಂತುಗಳು ಇವುಗಳನ್ನು ತಿಂದು ಆ ಜೀವಿಗಳಿಂದ ಮನುಷ್ಯ ಪಡೆಯುವ ಉತ್ಪನ್ನಗಳ ಮೂಲಕ ಆರೋಗ್ಯಕ್ಕೆ ಮಾರಕವಾದ ರಾಸಾಯನಿಕಗಳು ಮನುಷ್ಯನ ರಕ್ತದಲ್ಲಿ ಸೇರುತ್ತಿದೆ. ಈ ಕಲುಷಿತತೆ ಭೂಗರ್ಭದಲ್ಲಿ ಸೇರಿ ಹಾಲಹಲವಾಗಿ ಬುಗೆಲೆಬ್ಬಿಸುವ ಹಂತದಲ್ಲಿ ನಾವಿದ್ದೇವೆಂಬುದು ಕಠೋರ ಸತ್ಯವಾಗಿದೆ. ಇನ್ನಾದರೂ ಎಚ್ಚೆತ್ತುಕೊಳ್ಳಲೇಬೇಕಾದ ಸ್ಥಿತಿಯಲ್ಲಿ ನಾವಿದ್ದೇವೆ.

ಪ್ರಕೃತಿಯೇ ವರವಾಗಿ ನೀಡಿರುವ ಪುನರಾವರ್ತನೆ ಪ್ರಕ್ರಿಯೆಗೆ ಹೆಚ್ಚಿನ ಒತ್ತು ನೀಡುವ ಮೂಲಕ ಕಸದಿಂದ ರಸ ಎಂಬ ನಾಣ್ನುಡಿಯಂತೆ ನಾವೆಲ್ಲರೂ ಇದರ ಬಗ್ಗೆ ಗಹನವಾದ ಚಿಂತನೆ ನಡೆಸಿ, ಮನೆ ಮತ್ತು ಸುತ್ತಮುತ್ತಲಿನ ಪರಿಸರದ ತ್ಯಾಜ್ಯಗಳನ್ನು ವಿಂಗಡಿಸಿ, ಪುನಾರಾವರ್ತನ ಪ್ರಕ್ರಿಯೆ ಮೂಲಕ ಇತರೆ ಉತ್ಪನ್ನಗಳಿಗಾಗಿ ಉದಾಹರಣೆಗೆ ರಸಗೊಬ್ಬರಗಳ ತಯಾರಿಕೆ ಮತ್ತು ಇತ್ತೀಚಿಕೆ ಆವಿಷ್ಕಾರಗೊಳಿಸಿರುವಂತೆ ಜೈವಿಕ ಅನಿಲ ಇತ್ಯಾದಿಗಳಾಗಿ ಪರಿವರ್ತಿತಗೊಳಿಸುವ ಮೂಲಕ ಜೀವನಕ್ಕೆ ಸಹಕಾರಿಯಾಗಿ ಪರಿಸರಕ್ಕೆ ಪೂರಕವಾಗಿ ಪರಿವರ್ತನೆಗೊಳಿಸಿ ಮತ್ತು ಸಂಶೋಧಕರು ನಿರೂಪಿಸಿರುವಂತೆ 1:10 ಪ್ರಮಾಣದಲ್ಲಿ "ಮನೆಗಿರಲಿ ಮರ" ಎಂಬ ಶೀರ್ಷಿಕೆಗನುಗುಣವಾಗಿ ಪರಿಸರವನ್ನು ಉಳಿಸುವಲ್ಲಿ ಪಣ ತೊಡಬೇಕಿದೆ.

ಅದು ತನ್ನ ನೈಜ ಸ್ವರೂಪದಲ್ಲಿರುವುದು. ಅದು ತನ್ನ ಸಮತೋಲನವನ್ನು ಕಳೆದುಕೊಂಡಾಗ ಪರಿಸರ ಮಾಲಿನ್ಯವಾಗುವುದು. ಪ್ರಕೃತಿ ಮತ್ತು ವ್ಯಕ್ತಿ ಒಂದಕ್ಕೊಂದು ಪೂರಕವಾಗಿರುವುದರಿಂದ ಪ್ರಕೃತಿಯ ಮಾಲಿನ್ಯವು ವ್ಯಕ್ತಿಯ ಮೇಲೆ ದುಷ್ಪರಿಣಾಮ ಬೀರುವುದು ಅವನ ಶಾರೀರಿಕ, ಮಾನಸಿಕ ಆರೋಗ್ಯ ಕೆಡುವುದು, ಜೀವನ ದುಸ್ತರವಾಗುವುದು. ಈ ಐದು ತತ್ವಗಳನ್ನು ರಕ್ಷಿಸಿ ಪೋಷಿಸಬೇಕಾದರೆ ನಾವು ಇವುಗಳನ್ನು ಗೌರವಿಸಬೇಕು, ಆರಾಧಿಸಬೇಕೆಂದು ನಮ್ಮ ಪೂರ್ವಜರು ಮನಗಂಡು ತಮ್ಮ ಜೀವನ ಪದ್ಧತಿಯನ್ನು ಇದೇ ನಿಟ್ಟಿನಲ್ಲಿ ರೂಪಿಸಿಕೊಂಡಿದ್ದರು. ಇಂದು ಪ್ರಕೃತಿಯಲ್ಲಿ ಪಂಚ ತತ್ವಗಳಲ್ಲಿ ಪ್ರತಿಯೊಂದು ಮಲಿನಗೊಂಡಿರುವುದು, ಶುದ್ಧವಾಗಿಲ್ಲ

ಎಂಬುದು ನಮ್ಮ ಅರಿವಿಗೆ ಬರುತ್ತಿದೆ. ಪ್ರಕೃತಿಯಲ್ಲಿ ಉಷ್ಣತೆ ಹೆಚ್ಚಾಗಿದೆ, ಆ ಉಷ್ಣತೆಯನ್ನು ಕಡಿಮೆ ಮಾಡುವಂತಹ ವಾಯು, ನೀರು ಮಲಿನಗೊಂಡಿದೆ, ಅಸಮತೋಲನದಲ್ಲಿದೆ.

ಮಹಾರಾಷ್ಟ್ರದಲ್ಲಿ ಸ್ವ-ಸಹಾಯ ಸಂಘದ ಮಹಿಳೆಯರು ಐಆಂಛಿ ಘಟಕವನ್ನು ನಡೆಸುತ್ತಿದ್ದಾರೆ. ಒಬ್ಬ ಮಹಿಳೆಗೆ ತಿಂಗಳಿಗೆ ರೂ.5,000/- ಸಿಗುತ್ತದೆ. ಪೂನಾ, ಚಂದ್ರಾಪುರ, ಪಂಡರಾಪುರ, ನಾಂದೇಡ್, ಔರಂಗಾಬಾದ್, ಇನ್ನಿತರ ಕಡೆ ಘಟಕಗಳನ್ನು ಸ್ಥಾಪಿಸಿದ್ದಾರೆ. 1 ಟನ್ ಕಸಕ್ಕೆ 3 ಸಿಲಿಂಡರ್ ಗ್ಯಾಸ್ ಸಿಗುತ್ತದೆ. ಹಾಸ್ಟೆಲ್‌ಗಳು/ ಕಾಲೇಜುಗಳಲ್ಲಿ ಸಹ ಇದನ್ನು ಮಾಡಬಹುದು. ಮನೆಯ ಮೇಲ್ಭಾಗದ ಛಾವಣಿಯಲ್ಲಿ ಗೊಬ್ಬರ ತಯಾರಿಸುತ್ತಿದ್ದಾರೆ. ಪಾರ್ಕಿನಲ್ಲಿ ಒಣಗಿದ ಎಲೆಗಳು ಇರುತ್ತವೆ. ಅದರಿಂದ ಸಹ ಗ್ಯಾಸ್ ಮಾಡಬಹುದು. ದೇವಸ್ಥಾನದಲ್ಲಿ ಉಪಯೋಗಿಸಿದ ಹೂವುಗಳು-ಪತ್ರೆಗಳು ಅದೂ ಸಹ ಇದಕ್ಕೆ ಉಪಯೋಗ ಬರುತ್ತೆ. ಗ್ರಾಮವಿಕಾಸ ಯೋಜನೆಗಳಲ್ಲಿ ಇದನ್ನು ಹಾಕಿಕೊಳ್ಳಬಹುದು.

ಮನುಷ್ಯ ಮಾನಸಿಕವಾಗಿ ಬೆಳೆದಂತೆಲ್ಲಾ, ಆತನಿಗೆ ಸೌಲಭ್ಯಗಳು ಹೆಚ್ಚಾದವೇ ಹೊರತು ಸುಖಜೀವನ ಸಿಗಲಿಲ್ಲ. ಜೀವಿಸುವ ವಿಧಾನ ಬೆಳೆಯಿತೇ ಹೊರತು, ಜೀವನ ಶೈಲಿ ಬೆಳೆಯಲಿಲ್ಲ. ಇಲ್ಲಿ ಪ್ರಶ್ನೆಯಿಷ್ಟೇ? ಮನುಷ್ಯ ಪರಿಸರವನ್ನು ತನ್ನ ಬೆಳವಣಿಗೆಯ ಮುಖಾಂತರ ಹಾನಿಗೊಳಿಸಿದನೇ ಹೊರತು, ಇರುವ ಪರಿಸರ ಉಳಿಸುವ ಪ್ರಯತ್ನ ಮಾಡಲಿಲ್ಲ. ಅದರ ಪರಿಣಾಮ ಇಂದು ಭೂಮಿಯ ತಾಪಮಾನ ಹೆಚ್ಚಾಗುತ್ತಿದೆ, ವಾತಾವರಣ ಕಲುಷಿತಗೊಳ್ಳುತ್ತಿದೆ, ನೀರು ಮಲಿನವಾಗುತ್ತಿದೆ.

**ಪರಿಸರ ಸಂರಕ್ಷಣೆಯಲ್ಲಿ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ತೊಡಗಿಸಿಕೊಳ್ಳುವ ಮೂಲಕ ಉತ್ತಮ ಪರಿಸರ ನಿರ್ಮಾಣಕ್ಕೆ ನೆರವಾಗಬೇಕು. – ಗುರುನಾಥ ಜಾಂತಿಕರ**



**ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ**

## ಕನ್ನಡ ಸಾರಸ್ವತ ಲೋಕದ ದೇ.ಜ.ಗೌ.ರವರಿಗೆ ಸಹಕಾರಿಗಳ ಶ್ರದ್ಧಾಂಜಲಿ



ದೇ.ಜ.ಗೌ. ಎಂದೇ ಖ್ಯಾತರಾಗಿದ್ದ ದೇ. ಜವರೇಗೌಡ ಅವರು ಕನ್ನಡದ ಪ್ರಮುಖ ಸಾಹಿತಿಗಳಲ್ಲಿ ಒಬ್ಬರು. 1918ರ ಜುಲೈ 8ರಂದು ಈಗಿನ ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಚಕ್ಕರೆಯಲ್ಲಿ ದೇವೇಗೌಡ-ಚನ್ನಮ್ಮ ದಂಪತಿಗಳ ಮಗನಾಗಿ ಜನನ. ಬಡತನವನ್ನು ಹಾಸಿಹೊದ್ದರೂ ವಿದ್ಯೆಯ ಕಡೆ ಅಪಾರವಾದ ಆಸಕ್ತಿ. ಚನ್ನಪಟ್ಟಣ ಹಾಗೂ ಬೆಂಗಳೂರಿನಲ್ಲಿ ವಿದ್ಯಾಭ್ಯಾಸ. ರಾಷ್ಟ್ರಕವಿ ಕುವೆಂಪು ಅವರಿಂದ ಪ್ರಭಾವಿತರಾಗಿ, ಮೈಸೂರಿನಲ್ಲಿ ಕನ್ನಡ ಎಂ.ಎ. ಪದವಿ. 1946ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಕನ್ನಡ ಅಧ್ಯಾಪಕರಾದರು. ಅನೇಕ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಹುದ್ದೆಗಳನ್ನು ನಿರ್ವಹಿಸಿದ್ದಾರೆ. 1969ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ತಮ್ಮ ಕನ್ನಡಪರವಾದ ರಚನಾತ್ಮಕ ಚಟುವಟಿಕೆಗಳನ್ನು ಆರು ವರ್ಷಗಳ ಕಾಲ ಮುಂದುವರೆಸಿದರು. (1975) ದೇ.ಜವರೇಗೌಡ ಅವರು ಕನ್ನಡದ ಆಧುನಿಕ ಸಂಸ್ಕೃತಿಯನ್ನು ಕಟ್ಟಿದವರಲ್ಲಿ ಒಬ್ಬರು.

ಸರಿಸುಮಾರು ಏಳು ದಶಕಗಳಿಂದ ಜಾನಪದ, ಗ್ರಂಥ ಸಂಪಾದನೆ, ಸಾಹಿತ್ಯ ವಿಮರ್ಶೆ, ಭಾಷಾಂತರ, ಜೀವನ ಚರಿತ್ರೆ, ಪ್ರವಾಸ ಸಾಹಿತ್ಯ ಮುಂತಾದ ಹಲವು ಕ್ಷೇತ್ರಗಳಲ್ಲಿ ವ್ಯಾಪಕವಾದ ಕೆಲಸ ಮಾಡಿದ್ದಾರೆ. ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಾಗಿ ಹತ್ತಾರು ಮಹತ್ವ ಯೋಜನೆಗಳನ್ನು ರೂಪಿಸಿದ, ಸಂಪನ್ಮೂಲಗಳನ್ನು ಸೃಷ್ಟಿಸಿ, ಅವನ್ನು ಯಶಸ್ವಿಯಾಗಿ ನಿರ್ವಹಿಸಿದ ದೇಜಗೌರ ಸಾಧನೆ ಅನುಪಮವಾದುದು.

ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಮತ್ತು ಮೈಸೂರು ವಿಶ್ವವಿದ್ಯಾಲಯದಲ್ಲಿ ಅವರು ಕನ್ನಡ ಅಭಿವೃದ್ಧಿಗೆ ಸಂಬಂಧಿಸಿದ ಹಲವು ಕೆಲಸಗಳನ್ನು ಮಾಡಿದ್ದಾರೆ. ದೇಜಗೌ ಅವರು ಪ್ರಾರಂಭಿಸಿದ ಮತ್ತು ಯಶಸ್ವಿಯಾಗಿ ನಿರ್ವಹಿಸಿದ 'ಕನ್ನಡ ವಿಶ್ವಕೋಶ', 'ವಿಷಯ ವಿಶ್ವಕೋಶ-ಕರ್ನಾಟಕ', 'ಇಂಗ್ಲಿಷ್-ಕನ್ನಡ ನಿಘಂಟು', 'ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ', 'ಕನ್ನಡ ಛಂದಸ್ಸಿನ ಇತಿಹಾಸ' ಮುಂತಾದ ಕೆಲವು ಮುಖ್ಯವಾದ ಯೋಜನೆಗಳನ್ನು ಇಲ್ಲಿ ಹೆಸರಿಸಬಹುದು. ಕರ್ನಾಟಕದಲ್ಲೇ ಮೊದಲ ಬಾರಿಗೆ 'ಜಾನಪದ ವಸ್ತು ಸಂಗ್ರಹಾಲಯ'ವನ್ನು ಸ್ಥಾಪಿಸಿ, ಜಾನಪದ ಅಧ್ಯಯನಕ್ಕೆ ತಳಹದಿಯನ್ನು ರೂಪಿಸಿಕೊಟ್ಟಿದ್ದು ಅವರ ಮುಖ್ಯವಾದ ಸಾಧನೆಗಳಲ್ಲಿ ಒಂದು. ವಿವಿಧ ಪ್ರಕಾರಗಳಲ್ಲಿ 135ಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದಾರೆ.

ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದ ದೇಜಗೌರವರು ದಿನಾಂಕ 30.05.2016ರಂದು ನಿಧನರಾಗಿದ್ದು, ಕನ್ನಡ ಸಾರಸ್ವತ ಲೋಕಕ್ಕೆ ತುಂಬಲಾರದ ನಷ್ಟವಾಗಿದೆ. ಶ್ರೀಯುತರ ಆತ್ಮಕ್ಕೆ ಶಾಂತಿ ಸಿಗಲೆಂದು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ, ಸಿಬ್ಬಂದಿ ವರ್ಗ ಹಾಗೂ ಸೌಹಾರ್ದ ಸಹಕಾರಿಗಳ ಪರವಾಗಿ ಕೋರಿದೆ.

# ಕಗ್ಗ ಪದ್ಯಗಳಲ್ಲಿ ಸಹಕಾರ ಸಾರ - 2



ಶ್ರೀ ಎಂ.ಬಸಪ್ಪ, ಸಹಕಾರ ಸಂಘಗಳ ಉಪನಿಬಂಧಕರು (ನಿವೃತ್ತ), ಬೆಂಗಳೂರು.



ಸುಭದ್ರ ಸಾಂಸ್ಕೃತಿಕ ನೆಲೆಗಟ್ಟು

"ಲೋಕಾಃ ಸಮಸ್ತಾಃ ಸುಖಿನೋ ಭವಂತು" ಎಂಬುದು ವಿಶ್ವದ ಸಮಸ್ತ ಜೀವರಾಶಿಗಳ ಸುಖ ಮತ್ತು ಕಲ್ಯಾಣಗಳನ್ನು ಬಯಸುವ ವಿಶ್ವವ್ಯಾಪ್ತಿ ಲೋಕೋಕ್ತಿ. ತಾನೊಬ್ಬ ಚೆನ್ನಾಗಿದ್ದರೆ ಸಾಲದು, ತನ್ನ ಪರಿಸರದವರು ಮತ್ತು ನೆರೆಹೊರೆಯವರು ಸುಖದಿಂದಿರ ಬೇಕು ಎನ್ನುವುದರ ಪ್ರಕಂಪನದ ಚಿಂತನಾಶೀಲತೆಯೇ ಮೇಲಿನ ಶ್ಲೋಕ ಸಂದೇಶದ ಸಾರ. ಈ ಮೂಲ ಚಿಂತನೆಯ ಸಾರ ಸಂಗ್ರಹವೇ ಸಹಕಾರ ಚಳುವಳಿಯ ಮೂಲೋದ್ದೇಶ. ಕೆಳಸ್ತರದ, ಕಡುಬಡವರನ್ನು ಮೇಲ್‌ಸ್ತರಕ್ಕೆ ತರುವಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಲವು ನೂರೆಂಟು ಕಲ್ಯಾಣ ಯೋಜನೆಗಳನ್ನು ರೂಪಿಸಿ, ಅನುಷ್ಠಾನಕ್ಕೆ ತರುತ್ತಿವೆ. ಅದೇಕೋ ಬಡವ ಬಡವನಾಗುತ್ತಲೇ, ಶ್ರೀಮಂತ ಶ್ರೀಮಂತನಾಗುತ್ತಲೇ ಇರುವುದು ಜನಜನಿತ ಹಾಗೂ ಕಠೋರ ಸತ್ಯ. ಇದರ ವಾಸ್ತವತೆಯ ಪರಿಶೀಲನೆಗೆ ಹೋದಾಗ ಯೋಜನೆಯ ನಿರೂಪಣೆಯಲ್ಲಿ ಸದುದ್ದೇಶವಿರುವ ಅಂಶ ಮೇಲ್ನೋಟಕ್ಕೆ ಕಂಡುಬಂದರೂ ಅನುಷ್ಠಾನ ಹಂತದಲ್ಲಿ ಲೋಪವಿರುವುದು ವ್ಯಕ್ತವಾಗುತ್ತದೆ.

ತಾಂತ್ರಿಕತೆಯ ತಾಕಲಾಟದಲ್ಲಿ ಹಾಗೂ ನಾಗರೀಕತೆಯ ನಾಗಾಲೋಟದಲ್ಲಿ ಸಿಲುಕಿಕೊಂಡಿರುವ ಮಾನವನು ಅಂತರಿಕ್ಷದಲ್ಲಿ ಹಕ್ಕಿಯಂತೆ ಹಾರುವುದನ್ನು ಕಲಿತ, ನೀರಿನಲ್ಲಿ ಮೀನಿನಂತೆ ಈಜುವುದನ್ನು ಕಲಿತ, ಆದರೆ ಸಹಕಾರದಿಂದ ಮನುಜ ಮನುಜರ ಅಭಿವೃದ್ಧಿಗಾಗಿ ದುಡಿಯುವುದನ್ನು ಮರೆತ. ಈ ಕೊರತೆಯನ್ನು ಅರಿತು ಸಹಬಾಳ್ವೆಯನ್ನು ಅನುಷ್ಠಾನಗೊಳಿಸುತ್ತಾ ಸರ್ವತೋಮುಖ ಅಭಿವೃದ್ಧಿಗಾಗಿ ಜಗತ್ತಿನ ಸರ್ವಜನರನ್ನು "ಸಹೋದರರನ್ನಾಗಿ ತಬ್ಬಿಕೋ" ಅಂದರೆ ಅರ್ಥೈಸಿಕೊಂಡು ನಡೆ ಎಂಬ ಸಂದೇಶವನ್ನು ಈ ಚಮತ್ಕಾರಿಕ ಪದ್ಯದಲ್ಲಿ ಮಾನ್ಯ ಡಿವಿಜಿಯವರು ಕರೆ ಕೊಡುತ್ತಿದ್ದಾರೆ.

"ಒಬ್ಬನುಣುವೂಟದಲಿ ಸವಿಯಿಲ್ಲ ಸೊಗಸಿಲ್ಲ
ಇಬ್ಬರಾಗುವೆನೆಂದನಂತೆ ಪರಬೊಮ್ಮಂ
ಹೆಬ್ಬದುಕನೊಂಟಿತನದೊಳೇನು ಕಳೆಯುವಿಯೋ
"ತಬ್ಬಿಕೊಳೋ ವಿಶ್ವವನು" ಮಂಕುತಿಮ್ಮ"

ಭಗವಂತನೂ ಸಹ ಒಂದು ದಿನ ಊಟಕ್ಕೆ ಕುಳಿತಾಗ ಒಬ್ಬನೇ ಉಣ್ಣುವುದರಲ್ಲಿ ರುಚಿಯಿಲ್ಲವೆಂದು ಬೇಸರಗೊಂಡನಂತೆ. ಆದ ಕಾರಣ ಜಗತ್ತಿನ ವಿವಿಧ ರೂಪವಾಗಿ ಹೊರಹೊಮ್ಮಿದನಂತೆ. ಹಿರಿದಾದ ಮಹತ್ವವಾದ ಬದುಕನ್ನು ಒಂಟಿತನದೊಳು ಕಳೆದು ವ್ಯರ್ಥಗೊಳಿಸುವುದಕ್ಕಿಂತ ಒಟ್ಟಾಗಿ ಬಾಳಿ ಸಹಕಾರವನ್ನು ಬದುಕಿನಲ್ಲಿ ತನ್ನಿ ಎನ್ನುವ ಸಂದೇಶವನ್ನು ಈ ಪದ್ಯ ಸಾರುತ್ತದೆ.

ಆಧುನಿಕ ಭಗವದ್ಗೀತೆಯೆನಿಸಿದ ಮಂಕುತಿಮ್ಮನ ಕಗ್ಗದಲ್ಲಿ ಡಿವಿಜಿಯವರು ಧರ್ಮ, ಸತ್ಯ, ಪ್ರಕೃತಿ, ಮಾನಸಿಕ ತೊಳಲಾಟ ಇತ್ಯಾದಿಗಳ ಬಗ್ಗೆ ಎಲ್ಲಾ ಪ್ರಾಕಾರಗಳನ್ನು ಒಳಗೊಂಡಂತೆ ಪದ್ಯಗಳನ್ನು ರಚಿಸುತ್ತಾ, ಸಹಕಾರ ಮನೋಭಾವವನ್ನು ಬೆಳೆಸಿಕೊಂಡು ""ತಬ್ಬಿಕೊಳೋ ವಿಶ್ವವನು" ವಿಶ್ವದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲು ಕರೆನೀಡಿರುತ್ತಾರೆ. ಆದಕಾರಣ ನಾವೆಲ್ಲರೂ ಸಹಕಾರದ ಈ ಭಾವವನ್ನು ಅನುಷ್ಠಾನಕ್ಕೆ ತರುತ್ತಾ, ಕೇವಲ ನುಡಿವೀರರಾಗದೇ ನಡೆವೀರರಾಗುವ ಮೂಲಕ ಅಂದರೆ ಮಾತಿಗಿಂತ ಕೃತಿಯಲ್ಲಿ ತೊಡಗೋಣವೆಂಬ ಮನಪರಿವರ್ತನೆ ಮಾಡಿಕೊಂಡು ಸಹಕಾರದ ಅಭ್ಯುದಯಕ್ಕೆ ಶ್ರಮಿಸೋಣ.



ಶ್ರೀ ಶಾಂಭವಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಗೋಕಾಕ ಸಹಕಾರಿಯ ಪ್ರಥಮ ಶಾಖೆಯನ್ನು ಚಿಕ್ಕೋಡಿ ತಾಲ್ಲೂಕಿನ ಗಳತಗಾ ಗ್ರಾಮದಲ್ಲಿ ಶ್ರೀ ಮ.ನಿ.ಪ್ರ. ಶಿವಬಸವ ಸ್ವಾಮೀಜಿಯವರಿಂದ ಉದ್ಘಾಟನೆ.




ಸೂರ್ಯ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಅಲಗೇರಿ ಸಹಕಾರಿಯ 3ನೇ ಶಾಖೆಯು ಅವರ್ಸಾದಲ್ಲಿ ಉದ್ಘಾಟನೆ.

# ಜಲ ಸಂರಕ್ಷಣೆ – ಸೌಹಾರ್ದ ಅಭಿವೃದ್ಧಿಯ ಹೊಸ ಪರಿಕಲ್ಪನೆ

ಶ್ರೀ ರಘುನಂದನ ಕೆ., ಸಹಪ್ರಧಾನ ವ್ಯವಸ್ಥಾಪಕ, ಕರಾಸೌಸಂಸನಿ., ಬೆಂಗಳೂರು.

ಬಿರು ಬೇಸಿಗೆಯ ಧಗೆ ಮುಗಿದು ಮಳೆಗಾಲ ಆರಂಭವಾಗುವ ನಿರೀಕ್ಷೆಯಲ್ಲಿದ್ದೇವೆ. ಅಲ್ಲಲ್ಲಿ ಮಳೆಯ ಸಿಂಚನವಾಗುತ್ತಿದೆ. ಆದರೂ ಜಲಕ್ಷಾಮದ ಬವಣೆಗಳು ಕಡಿಮೆಯಾಗಿಲ್ಲ. ಕುಡಿಯುವ ನೀರು ಬತ್ತಿದೆ, ಅಂತರ್ಜಲ ಎಟುಕುತ್ತಿಲ್ಲ, ಸರ್ಕಾರ ನೀರು ಪೂರೈಕೆಗೆ ಹೆಣಗಾಡುತ್ತಿದೆ. ಮತ್ತೆಲ್ಲೊ ನದಿ ಜೋಡಣೆಯ ಪರಿಹಾರ ಹುಡುಕುವ ಪ್ರಯತ್ನ ನಡೆದಿದೆ. ಜೀವದಾಯಿ ಮಳೆಗಾಗಿ ಭೂಮಿ ಮತ್ತು ಜೀವ ಸಂಕುಲ ಕಾದು ಕುಳಿತಿದೆ. ನಿಸರ್ಗಕ್ಕೆ ಕರುಣೆ, ಮಳೆ ಸುರಿಯುತ್ತದೆ, ನೀರು ಹರಿಯುತ್ತದೆ, ನಾವು ತಂಪಾಗುತ್ತೇವೆ. ಮುಂದಿನ ವರ್ಷದ ಬೇಸಿಗೆಗೆ ಮತ್ತದೇ ನೀರ ಹಾಹಾಕಾರ. ಪ್ರತಿ ವರ್ಷ ಕರ್ನಾಟಕದಲ್ಲಿ 15 ಸಾವಿರ ಎಕರೆಯಷ್ಟು ಪ್ರದೇಶ ಬರಡಾಗುತ್ತಿದೆ ಎನ್ನುತ್ತವೆ ಅಧ್ಯಯನಗಳು. ಕಾರಣ ಹುಡುಕಿದರೆ ನಾವೇ ಮಾಡಿಕೊಂಡ ನೂರು ತಪ್ಪು. ತಪ್ಪಿಗೆ ಕಾರಣ ಹುಡುಕುತ್ತ ಕುಳಿತರೆ ದಾಹ ಇಂಗುವುದಿಲ್ಲ. ಪರಿಹಾರ ಹುಡುಕುವ ಪ್ರಯತ್ನವೂ ನಮ್ಮದೇ ಆಗಬೇಕಲ್ಲವೇ.

ಪರಿಶುದ್ಧ ನೀರು, ಗಾಳಿ ಎಲ್ಲವನ್ನು ಉಚಿತವಾಗಿ ಪಡೆಯುವ ಅರ್ಹತೆಯನ್ನು ನಾವು ಅಭಿವೃದ್ಧಿಯ ಹೆಸರಿನಲ್ಲಿ ಕಳೆದುಕೊಂಡಾಗಿದೆ. ಅವುಗಳನ್ನು ನಾವೇ ಪ್ರಯತ್ನದಿಂದ ಪಡೆಯವ ಹಾಗೂ




ಮುಂದಿನ ಪೀಳಿಗೆಗೆ ವರ್ಗಾಯಿಸುವ ಕೆಲಸವನ್ನು ಮಾಡಬೇಕಿದೆ. ನೀರೆನ್ನುವುದು ಜೀವಜಲ, ಅದರ ಕೊರತೆಯಾದಾಗ ಎಚ್ಚೆತ್ತು ಕುಳಿತರೆ ಮಳೆ ಸುರಿಯುವುದಿಲ್ಲ, ಸರ್ಕಾರದ ಯೋಜನೆಗಳು ಪೂರ್ಣವಾಗುವವರೆಗೆ ಬದುಕು ಕಾಯುವುದಿಲ್ಲ. ಭೂಮಿ ಎನ್ನುವ ಬ್ಯಾಂಕಿನಲ್ಲಿ ನೀರನ್ನು ಠೇವಣಿ ಇಟ್ಟರೆ ಬೇಸಿಗೆಯಲ್ಲಿ ಅದು ತನ್ನಿಂತಾನೆ ನಗದಾಗುತ್ತದೆ, ಠೇವಣಿಯನ್ನೇ ಇಡದೇ ನಗದಿನ ಕನಸು ಕಾಣುವುದನ್ನು ಬಿಡುವ ಕಾಲ ಬಂದಿದೆ. ಹಾಗಾಗಿಯೇ ಜಲ ಸಂರಕ್ಷಣೆಯ ಅಗತ್ಯತೆ ಎಂದಿಗಿಂತ ಹೆಚ್ಚಾಗಿದೆ.

**ಒಂದಷ್ಟು ಯಶೋಗಾಥೆಗಳು :** ಬರದ ಊರಲ್ಲಿ ಬೀಳುವ ಅಲ್ಪ ಮಳೆ ನೀರ ಉಳಿಸಲು, ಅಂತರ್ಜಲ ಸಿಗದ ಗ್ರಾಮಗಳಲ್ಲಿ ಭೂಮಿಯೊಳಗೆ ನೀರ ಹರಿಸಲು, ನೀರ ಬವಣೆಯ ನಿವಾರಿಸಲು ಸುಲಭ ಹಾಗೂ ಕಡಿಮೆ ಖರ್ಚಿನ ಮಾರ್ಗ ಮಳೆ ನೀರು ಸಂರಕ್ಷಣೆ. 36 ವರ್ಷ ಬರದಲ್ಲಿ ನರಳಿದ ಚೀನಾದ ಗಾನ್ಸು ಪ್ರಾಂತ್ಯದ ದಾಹ ತೀರಿದ್ದು, ಅಭಿವೃದ್ಧಿ ರಾಷ್ಟ್ರವಾಗಿ ತನ್ನ ಹೆಸರು ಬರೆಸಿಕೊಂಡ ಥಾಯ್ಲೆಂಡ್ ದೇಶದ್ದು, ಅಷ್ಟೇಕೆ ಮಳೆ ನೀರ ಸಂರಕ್ಷಣೆಯ ಜಲಚರಿತ್ರೆಯಲ್ಲಿ ನಮ್ಮ ಗುಜರಾತ್ ಹಾಗೂ ರಾಜಸ್ಥಾನದ ಎಷ್ಟೋ ಗ್ರಾಮಗಳ ಯಶೋಗಾಥೆಗಳಿವೆ.

- ರಾಜಸ್ಥಾನದ ಬರದ ನಾಡಿನ ಲಾಪೋರಿಯಾ ಗ್ರಾಮದಲ್ಲಿ ಇಂದು ಹಸಿರು ನಳನಳಿಸುತ್ತಿದೆಯಾದರೆ, ಅಲ್ಲಿನ ರೈತರು, ಮಹಿಳೆಯರು ಸ್ವಾವಲಂಬಿಗಳಾಗಿದ್ದರೆ, ಒಂದು ಕಾಲದಲ್ಲಿ ಮೂರು ವರ್ಷಗಳಲ್ಲಿ ಬಿದ್ದ ಮಳೆಯ ಪ್ರಮಾಣ ಕೇವಲ 348 ಮಿ.ಮೀ. ಆಗಿದ್ದರೂ ನೀರಿಗೆ ಕೊರತೆಯಾಗಲಿಲ್ಲವಾದರೆ ಅದಕ್ಕೆ ಕಾರಣ ಅಲ್ಲಿನ ಜಲಸೇನಾನಿ ಲಕ್ಷ್ಮಣ ಸಿಂಗ್‌ರ ಜಲ ಸಂರಕ್ಷಣೆಯ ಹೋರಾಟ. ಇಂದು ಈ ಗ್ರಾಮದ ಮಾದರಿ ಸುತ್ತಲಿನ 200 ಹಳ್ಳಿಗೆ ವಿಸ್ತಾರಗೊಂಡಿದೆ, 3,50,000 ಕುಟುಂಬಗಳು ನೀರ ನೆಮ್ಮದಿಯಲ್ಲಿವೆ. ನೀರಾವರಿ ಜಮೀನಿನ ಪ್ರಮಾಣ 300 ಹೆಕ್ಟೇರ್‌ನಿಂದ 1500 ಹೆಕ್ಟೇರ್‌ಗೆ ಏರಿದೆ.
- ಮಹಾರಾಷ್ಟ್ರದ ಸತಾರಾ ಜಿಲ್ಲೆಯ ಅಜಿಂಕ್ಯತಾರಾ, ಸಮುದ್ರಮಟ್ಟದಿಂದ 3000 ಅಡಿಯಷ್ಟು ಎತ್ತರದಲ್ಲಿರುವ ನಗರದ ನೀರ ಬವಣೆಯನ್ನು ನೀಗಿಸಿಕೊಳ್ಳುವುದಕ್ಕಾಗಿ ಸರ್ಕಾರದ ಯೋಜನೆ, ನೆರವಿಗೆ ಕಾಯದೆ, ಸಾಮಾನ್ಯ ಜನರ ಗುಂಪೊಂದು ಡಾ.ಅವಿನಾಶ್ ಪೋಲ್ ಎನ್ನುವ ದಂತವೈದ್ಯರ ನೇತೃತ್ವದಲ್ಲಿ ನಿರಂತರ ಮೂರು ವರ್ಷದಿಂದ ಪ್ರತಿ ದಿನ 2 ಗಂಟೆಗಳಷ್ಟು ಕೆಲಸ ಮಾಡಿ, ಜಲ ದೇವತೆಯನ್ನು ಒಲಿಸಿಕೊಂಡಿದೆ. 40 ಜನರ ತಂಡದಲ್ಲಿ ವೈದ್ಯರು, ಗ್ರಾಮ ಸೇವಕರು, ಸರಪಂಚರು, ಇಂಜಿನಿಯರ್, ರಿಕ್ಷಾ ಡ್ರೈವರ್ ಎಲ್ಲಾ ಸೇರಿದ್ದಾರೆ, ತಮ್ಮ ದೈನಂದಿನ ಕಾರ್ಯದ ಜೊತೆಗೆ ಪ್ರತಿ ಮುಂಜಾನೆಯ ಎರಡು ಗಂಟೆಯನ್ನು ಜಲ ಸಂರಕ್ಷಣೆಗೆ ನೀಡಿದ ಫಲವಾಗಿ ಅಂತರ್ಜಲ ಏರಿದೆ, ಕೊಳವೆ ಬಾವಿಗಳಿಗೆ ನೀರು ಬಂದಿದೆ, ಹಸಿರು ಚಿಗುರಿದೆ.
- ಹುಬ್ಬಳ್ಳಿಯ ಸಮೀಪದ ಹಾರೋಗೇರಿಯಲ್ಲಿ ಸರ್ವೋದಯ ಮಹಾಸಂಘದ ನೇತೃತ್ವದಲ್ಲಿ 1999ರಲ್ಲಿಯೇ 140 ಅಡಿ ಉದ್ದದ 12

ಅಡಿ ಎತ್ತರದ ಬಾಂದಾರವೊಂದನ್ನು ನಿರ್ಮಿಸಲಾಗಿದೆ. ಇದರಲ್ಲಿ 20 ಲಕ್ಷ ಲೀಟರ್ ನೀರು ಸಂಗ್ರಹಿಸಲು ಸಾಧ್ಯ, ಇದಕ್ಕೆ ತಗುಲಿದ ವೆಚ್ಚ ರೂ.60,000/- ಇದರ ವಿಶೇಷವೆಂದರೆ 22 ಹಳ್ಳಿಗಳ ಸುಮಾರು ಐದು ನೂರರಷ್ಟು ಜನರು 3 ತಿಂಗಳ ಶ್ರಮದಾನದಿಂದ ಇದನ್ನು ಕಟ್ಟಿರುವುದು. ಗ್ರಾಮೀಣ ಸಮುದಾಯದಿಂದ ಜಲಸಂರಕ್ಷಣೆಗೆ ಇದು ಮಾದರಿ.

- ನೊಬೆಲ್ ನೀರಿನ ಪ್ರಶಸ್ತಿ ಎಂದೇ ಪರಿಚಿತವಾದ ಸ್ಟಾಕ್‌ಹೋಮ್ ಜಲಪ್ರಶಸ್ತಿಗೆ ಭಾಜನರಾದ, ಅಂತಾರಾಷ್ಟ್ರೀಯ ಮ್ಯಾಗ್ಸೆಸ್ಸೇ ಪ್ರಶಸ್ತಿ ಪುರಸ್ಕೃತರೂ ಆದ ರಾಜೇಂದ್ರ ಸಿಂಗ್ ಆಧುನಿಕ ಭಗೀರಥ ಎಂದೇ ಪ್ರಸಿದ್ಧರು. ಸದಾ ನೀರಿನ ಸಮಸ್ಯೆಯಿಂದ ಬಳಲುವ ರಾಜಸ್ಥಾನದ ಆಳ್ವಾರ್ ಪ್ರದೇಶವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು 1000ಕ್ಕೂ ಅಧಿಕ ಹಳ್ಳಿಗಳನ್ನು ನೀರಿನ ಸಮಸ್ಯೆಯಿಂದ ಮುಕ್ತಗೊಳಿಸಿದ್ದಾರೆ. ಇವರು, ಬತ್ತಿಹೋಗಿದ್ದ ಐದಾರು ನದಿಗಳನ್ನು ವರ್ಷವಿಡೀ ಹರಿಯುವಂತೆ ಮಾಡಿದ್ದಾರೆ. ತಮ್ಮ ಎನ್‌ಜಿಒ 'ತರುಣ ಭಾರತ ಸಹಕಾರ ಸಂಘ'ದ ನೆರವಿನೊಂದಿಗೆ ಕಿರು ಅಣೆಕಟ್ಟುಗಳ ನಿರ್ಮಾಣ, ಮಳೆ ನೀರು ಇಂಗಿಸುವಿಕೆಯಿಂದ ಈ ಸಾಧನೆ ಸಾಧ್ಯವಾಗಿದೆ.

ಸಾಧನೆಗಳು ದಿಢೀರ್ ನಿರ್ಮಾಣವಾಗುವುದಿಲ್ಲ, ಪರಿಹಾರದ ಯಶೋಗಾಥೆಗಳ ಓದುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಒಬ್ಬ ವ್ಯಕ್ತಿಯಿಂದ ಸಾಧ್ಯವಾಗುವುದಾದರೆ, ಜಾತಿ, ವರ್ಗಗಳನ್ನು ಮೀರಿ ದುಡಿವ ಅಜಿಂಕ್ಯತಾರಾದ ಜಲ ಸೇನಾನಿಗಳಿಂದ ಸಾಧ್ಯವಾಗುವುದಾದರೆ, 3 ತಿಂಗಳ ಶ್ರಮದಾನದಿಂದ ದಶಕಗಳ ಸಮಸ್ಯೆ ನಿವಾರಿಸಲ್ಪಡುವುದು ಸಾಧ್ಯವಾಗುತ್ತದೆ ಎಂದಾದರೆ, ಸಾಮಾಜಿಕ ಕಳಕಳಿಯ ಧ್ಯೇಯ ಹೊಂದಿರುವ ಎಲ್ಲ ಭಾಗವನ್ನು ತಲುಪಿರುವ ಸಹಕಾರ ಸಂಸ್ಥೆಗಳಿಂದ ಏಕೆ ಸಾಧ್ಯವಿಲ್ಲ. ಆಧುನಿಕ ಭಗೀರಥರಾಗುವ ಅವಕಾಶ ಸಹಕಾರ ಸಂಸ್ಥೆಗಳಿಗಿದೆ, ಭೂಮಿ ಕಾಯುತ್ತಿದೆ ನೀರ ಠೇವಣಿಗಾಗಿ.

**ಜಲ ಸಂರಕ್ಷಣೆಯ ಮಾರ್ಗಗಳು :** ಜಲ ಸಂರಕ್ಷಣೆ ತೀರಾ ಕಷ್ಟಕರವಾದದ್ದೇನು ಅಲ್ಲ, ತುಂಬಾ ಹಣವನ್ನು ಕೂಡ ಕೇಳುವುದಿಲ್ಲ, ಅತ್ಯಂತ ಸರಳ ವಿಧಾನ, ಮನಸ್ಸುಗಳು ಸಿದ್ಧವಾಗಬೇಕು ಅಷ್ಟೇ. ಜಲ ಸಂರಕ್ಷಣೆಯ ಪ್ರಮುಖ ವಿಧಾನಗಳೆಂದರೆ – ಛಾವಣಿ ನೀರಿನ ಸಂಗ್ರಹ, ಬೋರ್‌ವೆಲ್, ಬಾವಿ, ಕೆರೆಗಳ ಪುನಶ್ಚೇತನ, ಅಂತರ್ಜಲ ಹೆಚ್ಚಿಸುವುದು, ನೀರ ಬಳಕೆಯ ಬಗ್ಗೆ ಜಾಗೃತಿ ಮೂಡಿಸುವುದು.

ಮಳೆ ನೀರನ್ನು ಭೂಮಿಗೆ ಇಂಗಿಸುವ, ಮಳೆ ನೀರನ್ನು ಹಿಡಿದಿಡುವ ವ್ಯವಸ್ಥೆಗಳನ್ನು ಮಾಡಬೇಕು. ನೀರಿನ ಸಂಕಷ್ಟ ತೀವ್ರವಾಗಿ ಎದುರಿಸುತ್ತಿರುವ ಗ್ರಾಮಗಳಲ್ಲಿ ಕೆರೆ, ಒಡ್ಡು, ಕೃಷಿ ಹೊಂಡ, ಬದುಗಳನ್ನು ನಿರ್ಮಿಸಲು ನೆರವು ನೀಡಬೇಕು. ಕೆರೆಗಳ ಹೂಳೆತ್ತುವುದು, ಹೊಸ ಕೆರೆಗಳ ನಿರ್ಮಾಣಕ್ಕೆ ಮುಂದಾಗಬೇಕು. ಹಾಳು ಬಿದ್ದ ಬಾವಿ, ಕೊಳವೆ ಬಾವಿಗಳಿಗೆ ಮಳೆ ನೀರನ್ನು ಹರಿಸಿ ಪುನಶ್ಚೇತನಗೊಳಿಸುವ ಕೆಲಸವಾಗಬೇಕು. ಅಂತರ್ಜಲ ಹೆಚ್ಚಿಸುವ ಮಳೆ ನೀರ ಕೊಯ್ಲು, ಇಂಗು ಗುಂಡಿ, ಜಲಮರುಪೂರಣದಂತಹ ವಿಷಯಗಳ ಬಗ್ಗೆ ಜಾಗೃತಿ ಮೂಡಿಸಬೇಕು. ಕೆರೆಗಳ ಪುನರುಜ್ಜೀವನ ವಿಷಯವನ್ನು ಪ್ರಚುರಪಡಿಸಿ ಶ್ರಮದಾನಗಳನ್ನು ಮಾಡಬೇಕು.

ಎಲ್ಲ ಯಶೋಗಾಥೆಗಳಿಗೆ ಕಾರಣವಾಗಿದ್ದು ಮಳೆ ನೀರ ಸಂರಕ್ಷಣೆಯ ಇದೇ ಸುಲಭ ಮಾರ್ಗಗಳು, ಪಥ ಸ್ಪಷ್ಟ, ಪಥಿಕನಿಗಾಗಿ ನಿರೀಕ್ಷೆ ಅಷ್ಟೇ. ಹಿಂದೆಲ್ಲ ಊರ ಶ್ರೀಮಂತರು ಕೆರೆಗಳನ್ನೇ ನಿರ್ಮಾಣ ಮಾಡುತ್ತಿದ್ದರು ಎನ್ನುವ ಕಥೆಯನ್ನು ನಾವೆಲ್ಲ ಕೇಳಿದ್ದೇವೆ, ಮರೆತಿದ್ದೇವೆ.

ಆದ್ದರಿಂದಲೇ, ನೀರಿನ ಸಮಸ್ಯೆ ಅತೀ ದೊಡ್ಡ ಪ್ರಮಾಣದಲ್ಲಿ ಕಾಡುತ್ತಿದ್ದರೂ ಅದನ್ನು ಉಳಿಸುವ, ಅಂತರ್ಜಲ ಹೆಚ್ಚಿಸುವ ಬಗ್ಗೆ ಜಾಗೃತಿ ಕಡಿಮೆ. ಆದರೆ, ನೀರು ಸಾಮಾಜಿಕ ಘರ್ಷಣೆಗಳಿಗೆ ಕಾರಣವಾಗುತ್ತಿದೆ, ಮುಂದಿನ ಯುದ್ಧಗಳು ನೀರಿಗಾಗಿ ಆಗುತ್ತವೆ ಎನ್ನುತ್ತಿವೆ ವರದಿಗಳು. ಈಗಾಗಲೇ ಅದರ ಲಕ್ಷಣಗಳನ್ನು ಕೂಡ ಕಾಣುತ್ತಿದ್ದೇವೆ ನಾವು.

ರಾಜ್ಯದ, ದೇಶದ ಅಭಿವೃದ್ಧಿಯಲ್ಲಿ ನೀರಿನ ಪಾತ್ರ ಮಹತ್ವದ್ದು ಎನ್ನುವುದು ನಮಗೆ ತಿಳಿದಿದೆ. ನಮ್ಮ ಪಾತ್ರದ ಬಗ್ಗೆ ಅರಿವು ಮೂಡಿಸಿಕೊಳ್ಳಬೇಕಿದೆ. ಸಹಕಾರ ಸಂಸ್ಥೆಗಳು ಬ್ಯಾಂಕಿಂಗ್ ಕ್ಷೇತ್ರದ ಸ್ಪರ್ಧೆಯನ್ನು ಎದುರಿಸಲು ಹೋರಾಡುತ್ತಿವೆ. ತಂತ್ರಜ್ಞಾನ ಬಳಕೆಯ ಪೈಪೋಟಿಯನ್ನು ಮೀರಿ, ಸಹಕಾರ ತತ್ವದ ಆಶಯಗಳನ್ನು ಅರಿತು ಜನರ, ಗ್ರಾಮದ ಮೂಲಭೂತ ಸಮಸ್ಯೆಗಳೆಡೆಗೆ ಗಮನಹರಿಸಿ, ಜೀವನ ಮಟ್ಟ ಸುಧಾರಿಸುವ ಪ್ರಯತ್ನ ಆರಂಭಿಸಿದರೆ ಎಲ್ಲಾ ಸ್ಪರ್ಧೆಗಳನ್ನು ಮೀರಿ ನಿಲ್ಲುವ ಶಕ್ತಿ ಬಂದೀತು.

ಸಹಕಾರ ಸಂಸ್ಥೆ ನಮ್ಮದು ಎನ್ನುವ ಭಾವ ಮೂಡಿಸುವ ಕೆಲಸ ಹಣದಿಂದ ಆಗದು, ನೆಲದೊಡಲ ಕೆಲಸದಿಂದ ಸಾಧ್ಯ. ಈ ನಿಟ್ಟಿನಲ್ಲಿ ಪ್ರತೀ ಗ್ರಾಮವನ್ನೂ ತಲುಪಿರುವ ಸಹಕಾರ ಸಂಸ್ಥೆಗಳು ಪ್ರಯತ್ನ ಆರಂಭಿಸಬೇಕಿದೆ. ಹಣಕಾಸು ವ್ಯವಹಾರಗಳೊಂದಿಗೆ ಸೌಹಾರ್ದ ಅಭಿವೃದ್ಧಿಯ ಪರಿಕಲ್ಪನೆಯಲ್ಲಿ ಹೊಸತನದ ಆವಿಷ್ಕಾರ ವಾಗಬೇಕಿದೆ.

ಜಲ ಸಾಕ್ಷರತೆ ಮತ್ತು ಜಾಗೃತಿಗಾಗಿ ಕೆಲಸ ಮಾಡುತ್ತಿರುವ ಸಂಸ್ಥೆಗಳ ಬಗ್ಗೆ, ಸಂಪನ್ಮೂಲ ವ್ಯಕ್ತಿಗಳ ಬಗ್ಗೆ ವಿವರಗಳನ್ನು http://kannada.indiawaterportal.org/ ನಲ್ಲಿ ಪಡೆಯಬಹುದು.

# ಸಾಲ ಗುಣಾತ್ಮಕವಾಗುವುದು ಹೇಗೆ?

ಶ್ರೀ ಎಸ್.ಜಿ.ಜೋಶಿ, ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿವೃತ್ತ)

ಸಹಕಾರಿ ಸಂಸ್ಥೆಯ ಮೂಲ ಉದ್ದೇಶ "ತಾನು ಎಲ್ಲರಿಗಾಗಿ ಎಲ್ಲರೂ ತನಗಾಗಿ". ಸಹಕಾರಿಗಳಲ್ಲಿ ಸದಸ್ಯತ್ವ ಪಡೆಯುವುದು ಸಹಕಾರಿಯ ಸೌಲಭ್ಯಗಳನ್ನು ಪಡೆದು ತಾನು ಆರ್ಥಿಕ ಅಭಿವೃದ್ಧಿ ಹೊಂದಬೇಕು ಎನ್ನುವ ಉದ್ದೇಶದಿಂದ. ಹೀಗಾಗಿ ಸಹಕಾರಿಗಳಲ್ಲಿ ಸದಸ್ಯನು ಸಾಲ ಪಡೆಯುವುದು ಅವಶ್ಯಕ. ಸಹಕಾರಿಗಳು ಸದಸ್ಯರಿಗೆ ಸಾಲ ನೀಡುವಾಗ ಅದು ಗುಣಾತ್ಮಕವಾಗಿರಬೇಕು. ಸದಸ್ಯರಿಗೆ ಸಕಾಲದಲ್ಲಿ ಸದುದ್ದೇಶಕ್ಕಾಗಿ ಹಾಗೂ ಸಹಕಾರಿಗೆ ಸಕಾಲದಲ್ಲಿ ಹಿಂತಿರುಗಿದಾಗ ಸಾಲ ಗುಣಾತ್ಮಕವೆನಿಸುತ್ತದೆ.

ಸಹಕಾರಿಗಳಲ್ಲಿ ಸಾಲ ನೀಡುವ ಮೊದಲು, ಸಾಲ ನೀಡಿದಾಗ ಹಾಗೂ ಸಾಲ ನೀಡಿದ ನಂತರ ಅನುಸರಿಸಬೇಕಾದ ಕ್ರಮಗಳನ್ನು ಚಾಚೂ ತಪ್ಪದೇ ಪಾಲಿಸಿದಲ್ಲಿ ಸಾಲ ಗುಣಾತ್ಮಕವಾಗುತ್ತದೆ. ಸಾಲ ಗುಣಾತ್ಮಕವಾಗುವ ವಿಚಾರದಲ್ಲಿ ಕೆಲವು ಕ್ರಮಗಳನ್ನು ಪಾಲಿಸಿದಲ್ಲಿ ಸಾಲ ಸಕಾಲದಲ್ಲಿ ವಾಪಸ್ಸು ಬರುತ್ತದೆ.

### ಭಾಗ – 1 : ಸಾಲದ ನಿಯಮಾವಳಿಗಳ ರಚನೆ

1. ಸಾಲಗಳನ್ನು/ ಮುಂಗಡಗಳನ್ನು ನೀಡಲು ನಿಮಗೆ ಸಾಲದ ನಿಯಮಾವಳಿಗಳು ಅವಶ್ಯವಾಗಿದ್ದು, ಅವುಗಳ ಅವಕಾಶಗಳ ಪ್ರಕಾರ ಕೆಲಸ ನಿರ್ವಹಿಸುವುದು ಉತ್ತಮ. ನಿಯಮಗಳು ಇರದೇ ಇದ್ದಲ್ಲಿ ರಚನೆ ಮಾಡಿಕೊಳ್ಳಬೇಕು.
2. ಸಾಲಗಳನ್ನು ನೀಡಲು ಉಪಸಮಿತಿಗಳ ರಚನೆಗೆ ಅವಕಾಶವಿದ್ದಲ್ಲಿ ಸದರಿ ಉಪಸಮಿತಿಗಳು ಸರಿಯಾಗಿ ಮತ್ತು ಸಮರ್ಪಕವಾಗಿ ಕೆಲಸ ನಿರ್ವಹಿಸುವಂತೆ, ಸದರಿ ಉಪಸಮಿತಿಗಳು ಕೈಗೊಂಡ ನಡವಳಿಗಳು ಆಡಳಿತ ಸಮಿತಿಯಲ್ಲಿ ಕಾಲಕಾಲಕ್ಕೆ ಅನುಮೋದನೆಗೊಳ್ಳುವಂತೆ ಕ್ರಮವಿಡುವುದು ಒಳ್ಳೆಯದು.

### ಭಾಗ – 2 : ಸಾಲ ಮಂಜೂರಿಗಾಗಿ ಅರ್ಜಿ ಸ್ವೀಕರಿಸಿದಾಗ

1. ಅರ್ಜಿದಾರನ ಸಾಲದ ಅವಶ್ಯಕತೆ/ ಉದ್ದೇಶ ಇವುಗಳನ್ನು ಸರಿಯಾಗಿ ಪರಿಗಣಿಸಿ, ಅವನಿಗೆ ನೀಡಬೇಕಾದ ಸಾಲದ ಪ್ರಮಾಣವನ್ನು ನಿರ್ಧರಿಸಿ, ಗರಿಷ್ಠ ರೂ.50,000/– ಸಾಲ ನೀಡಲು ಅವಕಾಶವಿದ್ದಲ್ಲಿ, ರೂ.50,000/– ಮೊತ್ತಕ್ಕೆ ಸಾಲ ನೀಡಲೇಬೇಕೆಂಬ ಕಡ್ಡಾಯವೇನೂ ಇರುವುದಿಲ್ಲ.
2. ಅರ್ಜಿದಾರನ ಸಾಲ ಮರುಪಾವತಿಯ ಸಾಮರ್ಥ್ಯವನ್ನು ಸರಿಯಾಗಿ ಪರಿಶೀಲಿಸಿ.
3. ಅರ್ಜಿದಾರನು, ಬೇರೆ ಸಂಸ್ಥೆಗಳಿಂದ/ ಬ್ಯಾಂಕುಗಳಿಂದ ಈಗಾಗಲೇ ಸಾಲ ಪಡೆದಿದ್ದಲ್ಲಿ ಅವುಗಳ ವಿವರಗಳನ್ನು ಪಡೆದುಕೊಳ್ಳಿ, ಒಂದು ವೇಳೆ ಪಡೆಯದೇ ಇದ್ದರೆ ಸದರಿ ಸಂಸ್ಥೆಗಳಿಂದ ನಿರಾಪೇಕ್ಷಣ ಪತ್ರ ಪಡೆದುಕೊಳ್ಳಿ.
4. ಸಾಲದ ಅರ್ಜಿಯ ನಮೂನೆಗಳಲ್ಲಿ ಪೂರ್ಣ ಮಾಹಿತಿಯನ್ನು ಪಡೆದುಕೊಂಡು ಯಾವುದೇ ವಿವರಗಳು ಖಾಲಿ ಇಲ್ಲದಂತೆ ಮಾಹಿತಿ ಪಡೆದುಕೊಳ್ಳಿ ಅರ್ಜಿದಾರನಿಗೆ ಸ್ಥಿರ ದೂರವಾಣಿ ಸಂಖ್ಯೆ, ಮೊಬೈಲ್ ಸಂಖ್ಯೆ, ಮೇಲ್ ಐಡಿ, ಅವನ ಪಾನ್ ನಂಬರ್ (PERMANENT ACCOUNT NUMBER) ಇವುಗಳ ವಿವರಗಳನ್ನು ಹೊಂದಿದ್ದಲ್ಲಿ ಅವುಗಳನ್ನು ಕಡ್ಡಾಯವಾಗಿ ಪಡೆದುಕೊಳ್ಳಿ.
5. ಮೂಲ ಸಾಲಗಾರನ ಹಾಗೂ ಜಾಮೀನುದಾರರ ಕುಟುಂಬದ ಸದಸ್ಯರ ಪೂರ್ತಿ ಹೆಸರುಗಳು, ವಯಸ್ಸು, ವಿಳಾಸ ಇವುಗಳ ಬಗ್ಗೆ ಪೂರ್ತಿ ವಿವರಗಳನ್ನು ಸಂಗ್ರಹಿಸಿ, ಸಾಲಗಾರರು ಅಥವಾ ಜಾಮೀನುದಾರರು ಮೃತರಾದಲ್ಲಿ ಅವರ ಸರಳವಾರಸುದಾರರ ಹೆಸರುಗಳನ್ನು ನಂತರ ಅಮಲ್ಜಾರಿ ಸಂದರ್ಭದಲ್ಲಿ ಸೇರ್ಪಡೆ ಮಾಡಲು ಅನುಕೂಲವಾಗುವುದು.



6. ಸಾಲಕ್ಕೆ ಭದ್ರತೆ ವಿವರಗಳನ್ನು ಸರಿಯಾಗಿ ಪಡೆದುಕೊಳ್ಳಿ. ಉದಾಹರಣೆಗೆ; ಜಾಮೀನು ಭದ್ರತೆ, ಸ್ಥಿರಾಸ್ತಿ ಭದ್ರತೆ.
7. ಅರ್ಜಿದಾರನು ವೇತನ ಪಡೆಯುವ ನೌಕರನಾಗಿದ್ದಲ್ಲಿ ಅವನ ಸಂಪೂರ್ಣ ವೇತನದ ವಿವರಗಳು, ಅವನ ವೇತನ ಬಟವಾಡೆ ಮಾಡುವ ಅಧಿಕಾರಿಯಿಂದ ಒಪ್ಪಿಗೆ ಪತ್ರ (ಅಂಡರ್ ಟೇಕಿಂಗ್) ಪಡೆದುಕೊಳ್ಳಿ.
8. ಇದಲ್ಲದೇ ಅವನ ಸ್ಥಿರಾಸ್ತಿಗಳ ವಿವರಗಳನ್ನು ಪಡೆಯುವುದು.
9. ಅರ್ಜಿ ಸಲ್ಲಿಸಿದ ವ್ಯಕ್ತಿಯು ನೌಕರನಾಗಿದ್ದರೆ ಅವನ ನಿವೃತ್ತಿಯ ದಿನಾಂಕವನ್ನು ತಪ್ಪದೇ ಪಡೆದುಕೊಳ್ಳುವುದು.
10. ಮುಖ್ಯಕಾರ್ಯನಿರ್ವಾಹಕನಿಂದ ಪ್ರತಿಯೊಂದು ಸಾಲದ ಅರ್ಜಿಯ ಬಗ್ಗೆ ಅರ್ಥಪೂರ್ಣ ವಿಶ್ಲೇಷಣೆ/ ಶಿಫಾರಸ್ಸು ಅಗತ್ಯ. ಯಾಂತ್ರಿಕವಾಗಿ ಅರ್ಜಿಯಲ್ಲಿ ಸಹಿ ಮಾಡಬೇಡಿ. ಕೋರಿದ ಸಾಲವನ್ನು ನೀಡಲು ನಿಮ್ಮ ಒಪ್ಪಿಗೆ ಇಲ್ಲದಿದ್ದಲ್ಲಿ, ಆ ಅರ್ಜಿಯನ್ನು ಉಪಸಮಿತಿಯ ಮುಂದೆ ಅಥವಾ ಆಡಳಿತ ಸಮಿತಿಯ ಮುಂದೆ ಮಂಡಿಸುವ ಸಂದರ್ಭದಲ್ಲಿ ನಿಮ್ಮ ಅಸಮ್ಮತಿಯನ್ನು ಸ್ಪಷ್ಟವಾಗಿ ನಮೂದಿಸಿ.
11. ಕೆಲವು ಸಂದರ್ಭದಲ್ಲಿ ಮಾರ್ಜಿನ್ ಮನಿ ಸಂಗ್ರಹಿಸಬೇಕಾಗಿದ್ದು, ಅಂತಹ ಸಂದರ್ಭದಲ್ಲಿ ಮಾರ್ಜಿನ್ ಮನಿ ಸಂಗ್ರಹಿಸಲು ಮರೆಯಬೇಡಿ.
12. ಕಛೇರಿ ಟಿಪ್ಪಣಿಯನ್ನು ಪ್ರತಿಯೊಂದು ಸಂದರ್ಭದಲ್ಲಿ ಬರೆಯುವ/ ಮಂಡಿಸುವ ಅಭ್ಯಾಸ ಬೆಳೆಸಿಕೊಳ್ಳಿ.
13. ಅರ್ಜಿದಾರನಿಗೆ ಸಾಲ ಪಡೆಯಲು ಅರ್ಹತೆ ಇದೆ ಎಂದು ನೀವು ನಿರ್ಧಾರಕ್ಕೆ ಬರುವುದಾದಲ್ಲಿ, ಅವನನ್ನು ಆಡಳಿತ ಸಮಿತಿಯ ಮುಂದೆ ಒಂದು ದಿವಸ ಸಂದರ್ಶನಕ್ಕಾಗಿ ಬರುವಂತೆ ವ್ಯವಸ್ಥೆ ಮಾಡಿ.
14. ಅಗತ್ಯವಿದ್ದಲ್ಲಿ ಆ ಪ್ರಕರಣದಲ್ಲಿ ಕಾನೂನು ಸಲಹೆಯನ್ನು ಪಡೆದುಕೊಳ್ಳಿ.
15. ಸಾಲಗಾರನಿಂದ ಕೆಲವು ಚೆಕ್ಕುಗಳನ್ನು ಮುಂಗಡವಾಗಿ ಸಹಿ ಪಡೆದುಕೊಂಡು ಸಾಲ ಮರುಪಾವತಿಗಾಗಿ ನಿಮ್ಮ ಅಭಿರಕ್ಷೆಯಲ್ಲಿ

ಇಟ್ಟುಕೊಳ್ಳಲು ಮರೆಯಬೇಡಿ. (ಇಂಡಿಯನ್ ಲಾ ರಿಪೋರ್ಟ್ಸ್ 2009 ಕರ್ನಾಟಕ ಪುಟ ಸಂಖ್ಯೆ 439)

### ಭಾಗ – 3 : ಸಾಲ ಬಿಡುಗಡೆ ಮಾಡುವ ಮೊದಲು

1. ಅರ್ಜಿದಾರನಿಂದ ಪಡೆಯಬೇಕಾದ ಎಲ್ಲಾ ದಾಖಲೆಗಳನ್ನು ಅಂದರೆ ಸಾಲದ ಅರ್ಜಿ, ಪ್ರಾಮಿಸರಿ ನೋಟ್, ಕರಾರುಪತ್ರ, ಇತ್ಯಾದಿಗಳು ಇವುಗಳನ್ನು ತಪ್ಪದೇ ಪಡೆದುಕೊಳ್ಳಿ.
2. ಸಾಲದ ನವೀಕರಣ ಸಂದರ್ಭದಲ್ಲಿ ಹೊಸದಾಗಿ ದಾಖಲೆಗಳನ್ನು ಪಡೆದುಕೊಳ್ಳಿ.
3. ಅರ್ಜಿದಾರನು ಸಾಲಕ್ಕಾಗಿ ಅಗತ್ಯವಿರುವ ಭದ್ರತೆ ಒದಗಿಸಿದ್ದಾನೆಯೇ? ಉದಾಹರಣೆ ಎಲ್ಐಸಿ ಪಾಲಿಸಿ ಅಸೈನ್‌ಮೆಂಟ್, ಮುದ್ದತಿ ಠೇವಿನ ಪತ್ರ, ವೇತನ ಬಟವಾಡೆ ಮಾಡುವ ಅಧಿಕಾರಿಯ ಒಪ್ಪಿಗೆ ಪತ್ರ.
4. ಪ್ರತಿಯೊಂದು ಸಾಲದ ಮಂಜೂರಾತಿ ಪ್ರಕರಣದಲ್ಲಿ, ಒಂದು ಮಂಜೂರಾತಿ ಆದೇಶವನ್ನು ಹೊರಡಿಸಲು ಕ್ರಮವಿಡಿ, ಅಗತ್ಯವಾದ ಷರತ್ತುಗಳನಬ್ಬು ವಿಧಿಸಿರಿ.
5. ಸಾಲ ಬಿಡುಗಡೆ ಮಾಡುವ ಮೊದಲು ಎಲ್ಲ ಷರತ್ತುಗಳನ್ನು ಅವನು ಪಾಲಿಸಿದ್ದಾನೆಯೇ? ಎಂಬುದನ್ನು ದೃಢಪಡಿಸಿಕೊಳ್ಳಿ.
6. ಮೂಲ ದಾಖಲಾತಿಗಳನ್ನು ಅಂದರೆ ಸೇಲ್ ಡೀಡ್ ಇವುಗಳನ್ನು ಪಡೆದುಕೊಳ್ಳಿ. ಇದರಿಂದಾಗಿ ಸಾಲಗಾರನಿಗೆ ಇದೇ ದಾಖಲೆಗಳ ಆಧಾರದ ಮೇಲೆ ಬೇರೆ ಸಂಸ್ಥೆಯಲ್ಲಿ ಸಾಲ ಪಡೆಯಲು ಸಾಧ್ಯವಾಗದು. ಕೇವಲ ಡಿ.ಟಿ.ಡಿ (Deposit of title deeds) ಪಡೆದುಕೊಂಡರೆ ಸಾಲದು.
7. ಸಾಲದ ಮೊತ್ತವನ್ನು ಚೆಕ್ ಮೂಲಕ ಮಾತ್ರ ವಿತರಿಸಿ.
8. ಸಾಲದ ಮೊತ್ತವನ್ನು ಸಂಬಂಧಿಸಿದವರಿಗೆ ನೇರವಾಗಿ ಪಾವತಿ ಮಾಡಿ.

ಎ) ವಾಹನ ಸಾಲವಾಗಿದ್ದಲ್ಲಿ, ವಾಹನ ವಿತರಕನಿಗೆ

ಬಿ) ನಿವೇಶನ ಖರೀದಿ ಮಾಡಿದ್ದಲ್ಲಿ, ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ನೋಂದಣಿ ದಾಖಲೆಗಳನ್ನು ಪಡೆದುಕೊಂಡು ನೇರವಾಗಿ ನಿವೇಶನವನ್ನು ಮಾರಾಟ ಮಾಡಿದವರಿಗೆ.

ಸಿ) ಬೇರೆ ಸಂಸ್ಥೆಯಿಂದ ನೀಡಲಾದ ಸಾಲದ ಮರುಪಾವತಿಗಾಗಿ ನೀವು ಸಾಲ ನೀಡುತ್ತಿದ್ದರೆ, ಸಂಬಂಧಿಸಿದ ದಾಖಲೆಗಳನ್ನು ಪಡೆದುಕೊಂಡು ನೇರವಾಗಿ ಆ ಸಂಸ್ಥೆಗೆ ಪಾವತಿ ಮಾಡಿ.

ಡಿ) ಶಿಕ್ಷಣ ಸಲುವಾಗಿ ಸಾಲ ನೀಡುತ್ತಿದ್ದರೆ ನೇರವಾಗಿ ಸಂಬಂಧಿಸಿದ ಶಿಕ್ಷಣ ಸಂಸ್ಥೆಗೆ ಚೆಕ್ ಮೂಲಕ ಪಾವತಿ ಮಾಡಿ.

ಇ) ಮನೆ ನಿರ್ಮಾಣಕ್ಕಾಗಿ ಸಾಲ ನೀಡುತ್ತಿದ್ದಲ್ಲಿ, ಒಂದೇ ಕಂತಿನಲ್ಲಿ ಪೂರ್ತಿ ಸಾಲವನ್ನು ಬಿಡುಗಡೆ ಮಾಡದೇ ಹಂತಗಳಲ್ಲಿ ಬಿಡುಗಡೆ ಮಾಡಿ. ಮೊದಲನೆಯ ಹಂತ ಪ್ಲಿಂತ ಹಂತದಲ್ಲಿ, ಎರಡನೆಯ ಲಿಂಟೆಲ್ ಹಂತದಲ್ಲಿ, ಮೂರನೆಯ ಹಂತ ಪೂರ್ತಿಯಾಗಿ ನಿರ್ಮಾಣ ಕೆಲಸ ಮುಗಿದ ನಂತರ.

9. ಸ್ಥಿರಾಸ್ತಿಗಳನ್ನು ಭದ್ರತೆಗಾಗಿ ನೀಡಲು ಬರದಂತಹ ಸ್ಥಿರಾಸ್ತಿಗಳನ್ನು ಭದ್ರತೆಯಾಗಿ ಪಡೆಯಬೇಡಿ.

ಎ) ಉದಾಹರಣೆಗೆ 10 ರಿಂದ 15 ವರ್ಷ ಸ್ಥಿರಾಸ್ತಿಯನ್ನು ಮಾರಾಟ ಮಾಡಬಾರದು ಎಂಬ ಷರತ್ತನ್ನು ಹೊಂದಿರುವ ಸ್ಥಿರಾಸ್ತಿಗಳು.

ಬಿ) ಸರಕಾರದಿಂದ ನೀಡಲಾಗಿರುವ ಜನತಾಮನೆಗಳು.

10. ಭದ್ರತೆಗಾಗಿ ನೀಡಲಾಗಿರುವ ಆಸ್ತಿಗಳ ವಿಮೆ ಮಾಡಲಾಗಿದೆಯೇ ಎಂಬುದರ ಬಗ್ಗೆ ಪರಿಶೀಲಿಸಿ.
11. ಸಾಲ ಬಿಡುಗಡೆಯಾದ ನಂತರ ಕಾಲಕಾಲಕ್ಕೆ/ ನಿರಂತರವಾಗಿ ಸಾಲಗಾರರನ್ನು ಸಂಪರ್ಕಿಸುವುದು. ಸಾಲ ವಿನಿಯೋಗದ ಬಗ್ಗೆ ಖಚಿತ ಪಡಿಸಿಕೊಳ್ಳುವುದು.

### ಭಾಗ – 4 : ಸಾಲ ಬಿಡುಗಡೆಯಾದ ನಂತರ

1. ಸಾಲದ ಕಂತುಗಳಲ್ಲಿ ಎಲ್ಲ ಪ್ರಕರಣಗಳಲ್ಲಿ ನಿಯಮಿತವಾಗಿ ಮರುಪಾವತಿಯಾಗುತ್ತಿವೆಯೇ ಎಂಬುದನ್ನು ಕನಿಷ್ಠ ಪ್ರತಿ 3 ತಿಂಗಳಿಗೊಮ್ಮೆ ಪರಿಶೀಲಿಸಿ.
2. ಯಾವ ಪ್ರಕರಣಗಳಲ್ಲಿ ನಿಯಮಿತವಾಗಿ ಮರುಪಾವತಿಯಾಗುತ್ತಿಲ್ಲ ಅಂತಹ ಪ್ರಕರಣಗಳನ್ನು ವಿಶೇಷ ಗಮನವಿಟ್ಟು ಪರಿಶೀಲಿಸಿ.
3. ಕಂತು ಮರುಪಾವತಿಯ ದಿನಾಂಕದ ಮೊದಲೇ ನೋಟೀಸುಗಳನ್ನು ಕಳುಹಿಸಲು ತಪ್ಪದೇ ಕ್ರಮವಿಡಿ, ಸಾಧ್ಯವಾದಷ್ಟು ನಮೂನೆಗಳನ್ನು ಮುದ್ರಿಸಿ ಇಟ್ಟುಕೊಳ್ಳಿ. ಉದಾಹರಣೆಗೆ ಬಿಳಿ ಬಣ್ಣದ ನೋಟೀಸನ್ನು ಮೊದಲು ಕಳುಹಿಸಿ, ಸಾಲದ ಕಂತು ಪಾವತಿಯಾಗದಿದ್ದಲ್ಲಿ ಕೆಂಪು ಬಣ್ಣದ ನೋಟೀಸನ್ನು ಕಳುಹಿಸಿ.
4. ಸಹಕಾರಿಯಿಂದ ನೀಡಿದ ಸಾಲ ಯಾವ ಉದ್ದೇಶಕ್ಕೆ ನೀಡಲಾಗಿತ್ತು. ಅದೇ ಉದ್ದೇಶಕ್ಕೆ ವಿನಿಯೋಗಿಸಲ್ಪಟ್ಟಿದೆಯೇ ಎಂಬುದನ್ನು ಪರಿಶೀಲಿಸಿರಿ. ಉದಾಹರಣೆ ಮನೆ ನಿರ್ಮಾಣದ ಸಾಲ, ಮನೆ ರಿಪೇರಿ ಸಾಲ.
5. ಸಾಲಗಾರರನ್ನು ಅಥವಾ ಅವನು ಕೈಗೊಳ್ಳುತ್ತಿರುವ ವ್ಯವಹಾರದ ಸ್ಥಳವನ್ನು ನಿಯಮಿತವಾಗಿ ಸಂಪರ್ಕಿಸಿ. ಅವನು ವ್ಯಾಪಾರಕ್ಕಾಗಿ ಸಾಲ ಪಡೆದಿದ್ದರೆ ಕನಿಷ್ಠ ಪ್ರತಿ 3 ತಿಂಗಳಿಗೊಮ್ಮೆ ಅವನಿಂದ ಸ್ಟಾಕ್ ಸ್ಟೇಟ್‌ಮೆಂಟ್ ಪಡೆದುಕೊಳ್ಳಿ.
6. ಪ್ರತಿವರ್ಷದ ಅಂತ್ಯಕ್ಕೆ ಸಾಲಗಾರನಿಂದ ಬಾಕಿ ಇರುವ ಸಾಲದ ದೃಢೀಕರಣ ಕುರಿತು ಸಾಲಗಾರನಿಂದ ಸಹಿ ಪಡೆದುಕೊಳ್ಳಿ.
7. ಸಾಲಗಾರನ ವಿಳಾಸ ಬದಲಾಗಿದ್ದಲ್ಲಿ ಅವುಗಳನ್ನು ಪಡೆದುಕೊಂಡು ನಿಮ್ಮ ದಾಖಲೆಗಳಲ್ಲಿ ಅಳವಡಿಸಿಕೊಳ್ಳಿ.
8. ಸಾಲಗಾರನು ಅಥವಾ ಜಾಮೀನುದಾರನು ಮೃತನಾಗಿದ್ದಲ್ಲಿ ಅವನ ಸರಳ ವಾರಸುದಾರರ ಬಗ್ಗೆ ಗರಿಷ್ಠ 90 ದಿವಸದ ಒಳಗಾಗಿ ಪಡೆದುಕೊಂಡು ಸೇರ್ಪಡೆ ಮಾಡಲು ಕ್ರಮವಿಡಿ.

### ಸಹಕಾರಿಯ ಆಡಳಿತ ಸಮಿತಿಯವರು ಗಮನದಲ್ಲಿ ಇಟ್ಟುಕೊಳ್ಳಬೇಕಾದ ಅಂಶಗಳು :

1. ಪ್ರತಿ ತಿಂಗಳು ಪ್ರತಿಯೊಂದು ಬಾಕಿ ಸಾಲಗಳ ಪರಿಶೀಲನೆ.
2. ಬಾಕಿ ಸಾಲಗಳ ವಸೂಲಾತಿಗಾಗಿ ಅಗತ್ಯವಿದ್ದಲ್ಲಿ ಕೂಡಲೇ ಪಂಚಾಯತ್ ದಾವೆಯನ್ನು ಸಲ್ಲಿಸಲು ಕ್ರಮ.
3. ಸಾಲ ವಸೂಲಾತಿ ಸಾಧ್ಯವಿಲ್ಲದಂತಹ ಪ್ರಕರಣಗಳ ಮತ್ತು ಅವುಗಳ ಬಗ್ಗೆ ಕೈಗೊಂಡ ಕ್ರಮಗಳ ವಿವರಗಳ ಪರಿಶೀಲನೆ.
4. ಸಂಸ್ಥೆಯ ಒಟ್ಟು ಬಾಕಿ ಸಾಲದ ಮೊತ್ತವನ್ನು ಗಮನದಲ್ಲಿಟ್ಟು ಕೊಂಡು, ಪ್ರತಿ ತಿಂಗಳು ಮಾರಾಟಾಧಿಕಾರಿಯು ಸಾಲ ವಸೂಲಾತಿಯಲ್ಲಿ ಸಾಧಿಸಬೇಕಾದ ಪ್ರಗತಿ ಕುರಿತು ಗುರಿಯನ್ನು ನಿಗದಿಪಡಿಸುವುದು. ಪ್ರತಿ ತಿಂಗಳು ಸಾಧಿಸಿದ ಪ್ರಗತಿಯನ್ನು ಗುರಿಗಳೊಂದಿಗೆ ತುಲನೆ ಮಾಡಿ ಪ್ರಗತಿಯನ್ನು ಪುನರವಲೋಕಿಸುವುದು. ಗುರಿಯ ಪ್ರಕಾರ ಪ್ರಗತಿ ಸಾಧಿಸಲು ಸಾಧ್ಯವಾಗದಿದ್ದಲ್ಲಿ ಅದಕ್ಕೆ ಕಾರಣಗಳನ್ನು ಕಂಡು ಹಿಡಿಯುವುದು. ಒಳ್ಳೆಯ ಸಾಧನೆ ಮಾಡಿದ ಅಥವಾ ಪೂರ್ತಿ ಗುರಿಗಳನ್ನು ತಲುಪಿದ ಮಾರಾಟಾಧಿಕಾರಿಗೆ ಪ್ರಶಂಸಾ ಪತ್ರ ನೀಡುವುದು ಅಥವಾ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಸನ್ಮಾನಿಸುವುದು.



# Reserve Bank of India News – May 2016

**K. Vittal Shetty,** kohimavittal@hotmail.com. Mobile : 9845699904

The second bi-monthly monetary policy statement will be announced on June 7, 2016.

**I. IMPORTANT NEWS : May 05, 2016 :** RBI releases "Draft Guidelines for 'on tap' Licensing of Universal Banks in the Private Sector. RBI released on its website, "Draft Guidelines for 'on tap' Licensing of Universal Banks in the Private Sector". It has sought views/comments on the draft guidelines from banks, non-banking financial institutions, industrial houses, other institutions and the public at large. Suggestions and comments on the draft guidelines may be sent by June 30, 2016 to the Chief General Manager, Reserve Bank of India, Department of Banking Regulation, Central Office, 13h floor, Central Office Building, Shahid Bhagat Singh Marg, Mumbai-400001. Suggestions/comments can also be emailed to nbddbr@rbi.org.in

Final guidelines will be issued and the process of inviting applications for setting up of new universal banks in the private sector will be initiated after receiving feedback, comments and suggestions on draft guidelines.

In a departure from the earlier guidelines on universal banks dated February 22, 2013, the present guidelines include (i) resident individuals and professionals having 10 years of experience in banking and finance as eligible persons to promote universal banks; (ii) large industrial/business houses are excluded as eligible entities but permitted to invest in the banks to the extent of less than 10 per cent; (iii) Non-Operative Financial Holding Company (NOFHC) has now been made non-mandatory in case of promoters being individuals or standalone promoting/converting entities who/which do not have other group entities; (iv) The NOFHC is now required to be owned by the promoter/promoter group to the extent of at least 51 per cent of the total paid-up equity capital of the NOFHC, instead being wholly owned by the promoter group; and (v) Existing specialised activities have been permitted to be continued from a separate entity proposed to be held under the NOFHC subject to prior approval from the Reserve Bank and subject to it being ensured that similar activities are not conducted through the bank as well.

**May 06, 2016 : RBI introduces Research Internship Scheme :** RBI has introduced a Research Internship Scheme to provide an opportunity to young individuals to expose themselves to cutting edge research in central banking. The scheme is aimed at individuals who have recently finished their graduation and wish to pursue PhD in economics, banking, finance or related fields, or to move to positions in government research institutions or financial institutions that require a quantitative and analytic orientation.

**Few Highlights of the Scheme are : Qualifications**

Applicants should have completed 3-year undergraduate degree plus one extra year of post-graduate studies or 4-year integrated courses such as B.Tech or B.E. before joining. The Reserve Bank seeks motivated candidates with quantitative oriented degrees in economics, finance, or statistical sciences or those with expertise in computer or data analytics or engineering. Programming skills or ability to acquire them are necessary. The Reserve Bank's work environment will give candidates many opportunities to learn and participate in research. Candidates should be keenly interested in the Reserve Bank's core areas of research and also be able to derive benefit from our work in these areas. The opportunity will be open to domestic as well as foreign students. Work experience is not a pre requisite.

**Mode of Application :** Selections will be done twice a year depending on the Reserve Bank's requirements in a manner that the internship commences from January 1 or July 1

**Method of Selection :** The Reserve Bank would select a maximum of 10 interns every year.

**Duration :** The internship will be for a period of 6 (six) months extendable for another 6 (six) months. Exceptional performers might be considered for further extension (total internship period may be for a maximum period of two years with a provision for renewal every six months).

**Facilities :** RBI would pay a stipend of Rs. 35,000 per month. Interns will be required to make accommodation arrangements of their own.

**May 09, 2016 :** RBI to issue 1000 banknotes with inset letter 'R. The design of these banknotes notes to be issued now is similar in all respects to the 1000 banknotes in Mahatma Gandhi Series - 2005 issued earlier.

All the banknotes in the denomination of 1000 issued by the Reserve Bank in the past, including 1000 denomination banknotes with ascending size of numerals in the number panels but without bleed lines and enlarged identification mark, will continue to be legal tender.

Swabhimani Sahakari, Monthly, Posting Day 8th.
Posted at Bangalore PSO, Mysore Road, Bangalore 560026
Registered No. RNP/BGW/1744/2014-16. RNI No. KARBIL - 2004/18001. Pages 24

**May 12, 2016 :** Comprehensive Master Directions on Interest Rate on Deposits for Co-operative Banks. RBI issued the Master Directions (MD) on Co-operative Banks - Interest Rates on Deposits and Advances. The Master Directions issued today consolidates all relevant instructions issued by the Reserve Bank of India so far on the subject and will be applicable to all co-operative banks, namely, state co-operative banks, central co-operative banks and primary (urban) co-operative banks, licensed or permitted to carry on banking business in India by the Reserve Bank.

**May 19, 2016 :** Frauds in UCBs : Changes in Monitoring and Reporting mechanism it has been decided to change the fraud monitoring and reporting mechanism at the Regional Offices and Central Fraud Monitoring Cell (CFMC) of the RBI. Accordingly, henceforth:

i. Frauds below 1.00 crore will be monitored by the respective Regional Office of the Department of Co-operative Bank Supervision (DCBS), RBI under whose jurisdiction the Head Office of the bank falls and
ii. Frauds of 1.00 crore and above will be monitored by CFMC, RBI, Bengaluru.

**Reporting of frauds by UCBs : Consequently, the reporting mechanism for fraud cases will be as under:**

Frauds below 1.00 lakh are not to be reported individually to the RBI. However, as done earlier, statistical data in respect of such frauds should be submitted to RBI in the prescribed quarterly statement.

Individual frauds of 1.00 lakh and above but below 1.00 crore should be reported to the Regional Office of Department of Cooperative Bank Supervision (DCBS) of RBI, under whose jurisdiction the Head Office of the bank falls, in FMR-1 format, within three weeks from the date of detection.

Individual frauds of 1.00 crore and above should be reported to Central Frauds Monitoring Cell (CFMC), Department of Banking Supervision (DBS), RBI, Bengaluru, in FMR-1 format, within three weeks from the date of detection with a copy to Regional Office of DCBS, RBI under whose jurisdiction the Head Office of the bank falls.

Additionally, in case of frauds of 1.00 crore and above, a flash report in the form of DO letter addressed to Principal Chief General Manager, DBS, CO, RBI has to be submitted within a week of such fraud coming to the notice of the bank's Head Office with a copy to Regional Office of DCBS, RBI under whose jurisdiction the Head Office of the bank falls.

II. Cancellation, Withdrawl, Penalties and Directions on Urban Co-operative Banks

**May 02, 2016 :** RBI has imposed a monetary penalty of 1.00 lakh (Rupees One lakh only Nagar Sahakari Bank Limited, Gorakhpur.

**May 04, 2016 :** RBI withdraws Directions issued to Dilip Urban Co-operative Bank Ltd., Barshi, District - Solapur, Maharashtra.

**May 05, 2016 :** RBI imposes penalty of 1.5 lakh (Rupees One Lakh Fifty Thousand only) on The Midnapore Peoples' Co-operative Bank Ltd.Dist- Paschim Medinipur, West Bengal

**May 05, 2016 :** RBI imposes penalty of 1.00 lakh (Rupees One Lakh only) on The Godhra Urban Co-operative Bank Ltd., Godhra, Dist. Panchmahal (Gujarat)

**May 06, 2016 :** RBI extends validity of the Directions issued to the Bhopal Nagrik Sahakari Bank Ltd., Bhopal (M.P.)

**May 12, 2016 :** RBI imposes penalty of 2.00 lakh ( Two Lakh only) on Jalgaon District Co-operative Bank Ltd., Jalgaon, Maharashtra

**May 16, 2016 :** RBI extends Directions issued to Shatabdi Mahila Sahakari Bank Ltd., Thane, District-Thane, Maharashtra till November 17, 2016

**May 19, 2016 :** RBI extends Directions issued to Lokseva Sahakari Bank Ltd., Pune, Maharashtra till November 19, 2016

**May 26, 2016 :** RBI imposes a monetary penalty of 5.00 lakh (Rupees five lakh only) penalty on Birdev Sahakari Bank Ltd, Ichalkaranji, Kolhapur

**May 30, 2016 :** RBI extends Directions issued to The Choundeshwari Sahakari Bank Ltd, Ichalkaranji, Kolhapur till November 30, 2016

**Source : www.rbi.org.in**

ಕೇಂದ್ರ ಕಛೇರಿ : ದೂರವಾಣಿ ಸಂಖ್ಯೆಗಳು : 080–23378375–80, 23474408, 23573291
ಬೆಂಗಳೂರು ವಿಭಾಗೀಯ ಕಛೇರಿ : ನಂ. 141, 1ನೇ ಮೈನ್, 1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1–ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010. ದೂ: 080 23525546
ಮೈಸೂರು ವಿಭಾಗೀಯ ಕಛೇರಿ : ನಂ. 200, ಶಂಕರ ಮಠ ಮುಖ್ಯರಸ್ತೆ, ಕಿಲ್ಲೇ ಮೊಹಲ್ಲಾ, ಮೈಸೂರು. ದೂ: 0821 2332299
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ : 0831–2401551
ಕಲಬುರಗಿ ವಿಭಾಗೀಯ ಕಛೇರಿಯ : ನಂ. 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ – 585102. ದೂ: 08472–270222.

Edited, Printed and Published by Sharangouda G. Patil – Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010